ಅಧ್ಯಕ್ಷರು : ನಮ್ಮದೇನೂ ತಕರಾರಿಲ್ಲ. ನಿಮ್ಮಬ್ಬರಿಗೂ ಸೇರಿ ಅಂದಾಜು ಎಷ್ಟು ಸಮಯ ಬೇಕಾಗುತ್ತದೆ ಎಂಬುದು ನನ್ನ ಪ್ರಶ್ನೆ. ಏಕೆಂದರೆ ನಾವು ಮಾನಸಿಕವಾಗಿ ತಯಾರಾಗಬೇಕಲ್ಲ. ನಾವು ಮತ್ತು ಉಪಾಧ್ಯಕ್ಷರು ತಯಾರಾಗಬೇಕು.

ಶ್ರೀ ಕೆ.ಎನ್. ನಾಗೇಗೌಡ : ಅಧ್ಯಕ್ಷರೇ, ಎರಡು ಗಂಟೆಯೊಳಗೆ ಎಲ್ಲವನ್ನೂ ಮುಗಿಸಿಬಿಡೋಣ. ಇದರ ಬಗ್ಗೆ ಏನು ಸೂಚನೆ ಬಂದಿದೆ, ಅದಕ್ಕೆ ಸಂಬಂಧಪಟ್ಟಂತೆ ಎಲ್ಲಾ ಕ್ಲಾರಿಫಿಕೇಶನ್ 2 ಗಂಟೆಯೊಳಗೆ ಮುಗಿಸಿಬಿಡುತ್ತೇವೆ.

ಅಧ್ಯಕ್ಷರು : ಸನ್ಮಾನ್ಯ ಕಂದಾಯ ಮಂತ್ರಿಗಳು ನಿಲುವಳಿ ಸೂಚನೆಗೆ ಸಂಬಂಧಪಟ್ಟಂತೆ ಸರ್ಕಾರದ ಉತ್ತರವನ್ನು ಹೇಳಬೇಕು.

ಮಂತ್ರಿಗಳ ಹೇಳಿಕೆ

ಕೃಷ್ಣಾ ಮೇಲ್ದಂಡೆ ಯೋಜನೆ ಕಾಮಗಾರಿಗಳ ವಿಳಂಬ ಹಾಗೂ ಅಸಮರ್ಪಕ ಪುನರ್ವಸತಿಯಿಂದಾಗಿ ಬಾಗಲಕೋಟೆ ಪಟ್ಟಣದ ಮುಳುಗಡೆ.

+ ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ರಾಜ್ಯದ ಪ್ರತಿಷ್ಠಿತ ಯೋಜನೆಯಾಗಿದ್ದು ಈ ಯೋಜನೆಯಲ್ಲಿ ವಿವಿಧ ಕಾಮಗಾರಿಗಳು ವೇಗದಿಂದ ನಡೆಯಲು ಸರ್ಕಾರವು ಗಮನಿಸಿದ್ದು, ಯೋಜನೆ ಕಾರ್ಯವನ್ನು ಪ್ರಗತಿಯಲ್ಲಿದ್ದೆ.

ಕಾಮಗಾರಿಗಳ ಬಗ್ಗೆ ಹೇಳುವುದಾರೆ, ಈ ಯೋಜನೆಯ ಕಾಮಗಾರಿಗಳು ತ್ವರಿತಗತಿಯಲ್ಲಿ ಸಾಗುತ್ತಿದೆ. ಈ ಕಾಮಗಾರಿಗೆ ಬೇಕಾಗಿರುವ ಆರ್ಥಿಕ ಸಹಾಯವನ್ನು ಗಮನದಲ್ಲಿ ಇಟ್ಟುಕೊಂಡು ರಾಜ್ಯವು ಈಗಾಗಲೇ ಕೃಷ್ಣಾ ಭಾಗ್ಯ ಜಲ ನಿಗಮ ಎಂಬ ನಿಯಮಿತ ಸಂಸ್ಥೆಯನ್ನು ಸ್ಥಾಪಿಸಿದ್ದು ಈ ನಿಗಮದಿಂದ ಕಳೆದ ಎರಡು ವರ್ಷಗಳಲ್ಲಿ ರೂ. 698.00 ಕೋಟಿಗಳನ್ನು ಸಂಗ್ರಹಿಸಲಾಗಿದೆ. ಈ ಪೈಕಿ ರೂ. 670.86 ಕೋಟಿಗಳನ್ನು ಖರ್ಚು ಮಾಡಲಾಗಿದೆ. 1997-98ನೇ ಸಾಲಿನಲ್ಲಿ ರೂ. 750-00 ಕೋಟಿಗಳನ್ನು ನಿಗಮದ ಮೂಲಕ ಸಂಗ್ರಹಿಸುವ ಗುರಿ ಇದ್ದು ಈಗಾಗಲೇ ರೂ. 400.00 ಕೋಟಿಗಳನ್ನು ಕ್ರೋಡೀಕರಿಸಲಾಗಿದೆ. ಇದರೊಂದಿಗೆ 1996-97ನೇ ಸಾಲಿನಿಂದ ಕೇಂದ್ರ ಸರ್ಕಾರದ "ತ್ವರಿತ ನೀರಾವರಿ ಲಾಭ ಯೋಜನೆ ಅಡಿಯಲ್ಲಿ" ಪ್ರಗತಿಯಲ್ಲಿರುವ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1ರ ಕಾಮಗಾರಿಗಳಿಗೆ ಕೇಂದ್ರ ಸರ್ಕಾರದ ಸಾಲದೆಂದು ರೂ. 114.00 ಕೋಟಿಗಳ ಸಾಲ ಮಂಜೂರಾಗಿದೆ. ಇದರಲ್ಲಿ ಇದುವರೆವಿಗೂ ರೂ. 57.00 ಕೋಟಿಯನ್ನು ಪಡೆಯಲಾಗಿದೆ. 1997-98 ನೇ ಸಾಲಿನಲ್ಲಿ ಈ ಯೋಜನೆಯ ಕಾಮಗಾರಿಗಳಿಗೆ ಕೇಂದ್ರ ಸರ್ಕಾರವು ರೂ. 100.00 ಕೋಟಿಗಳ ಸಾಲ ಸೌಲಭ್ಯವನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿದೆ. ಈ ಯೋಜನೆಗಾಗಿ ಜೂನ್ 97ರ ಅಂತ್ಯದವರೆವಿಗೆ ರೂ. 2558.87 ಕೋಟಿಗಳು ಖರ್ಚಾಗಿರುತ್ತದೆ. ಈ ಯೋಜನೆಯಡಿ

6.22 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲು ಉದ್ದೇಶಿಸಲಾಗಿದೆ. ಇದುವರೆವಿಗೆ 2.33 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಸಾಮರ್ಥ್ಯವನ್ನು ಒದಗಿಸಲಾಗಿದೆ. ಭೌತಿಕ ಪ್ರಗತಿ ನಿಗದಿತ ಕಾರ್ಯಕ್ರಮದಂತೆ ಸಾಧಿಸಲಾಗುತ್ತಿದೆ.

2ನೇ ಹಂತದಲ್ಲಿ ಈ ಯೋಜನೆಯಡಿ ನಿರಾಶ್ರಿತರಾಗುವ 95 ಹಳ್ಳಿಗಳಲ್ಲಿನ ಸಂತ್ರಸ್ತರಿಗೆ ಒಟ್ಟು 66 ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಬೇಕಾಗಿರುತ್ತದೆ. ಈ ಪೈಕಿ ಆಧ್ಯತೆ ಇರುವ ಹಳ್ಳಿಗಳನ್ನು ಗಮನದಲ್ಲಿಟ್ಟುಕೊಂಡು ಬಹುತೇಕ ಪುನರ್ವಸತಿ ಕೇಂದ್ರಗಳನ್ನು ಸಿದ್ಧಪಡಿಸಲಾಗಿದೆ. ಪುನರ್ವಸತಿ ಕಾರ್ಯ ಮೇಲ್ವಿಚಾರಣೆ ನಡೆಸಲು ಒಬ್ಬ ಸಮರ್ಥ ಹಿರಿಯ ಐಎಎಸ್ ಅಧಿಕಾರಿಯೊಬ್ಬರನ್ನು ಸರ್ಕಾರವು ನೇಮಿಸಿದ್ದು, ಪುನರ್ವಸತಿ ಕಾರ್ಯವನ್ನು ಆ ಅಧಿಕಾರಿಯ ಮೇಲ್ವಿಚಾರಣೆಯಲ್ಲಿ ತ್ವರಿತವಾಗಿ ನಿರ್ವಹಿಸಲಾಗುತ್ತಿದೆ. ಈ ಸಾಲಿನಲ್ಲಿ ಪುನರ್ವಸತಿ ಕಾರ್ಯಕ್ಕಾಗಿ ಆಯವ್ಯಯದಲ್ಲಿ ಸಾಕಷ್ಟು ಹಣವನ್ನು ಒದಗಿಸಿದ್ದು, ಹಣದ ಅಡಚಣೆ ಏನೂ ಇರುವುದಿಲ್ಲ.

ಈ ವರ್ಷದ ಮಾನ್‌ಸೂನ್ ಮಳೆಯ ದೆಶೆಯಿಂದ ಆಲಮಟ್ಟಿ ಜಲಾಶಯಕ್ಕೆ ಮಹಾರಾಷ್ಟ್ರ ರಾಜ್ಯದಿಂದ ನಿರಂತರ ನೀರು ಬರುತ್ತಿದ್ದು, ಪ್ರತಿದಿನ ಆಲಮಟ್ಟಿ ಜಲಾಶಯದ ನೀರಿನ ಮಟ್ಟ ಏರುತ್ತಲೇ ಇದೆ. ದಿನಾಂಕ 5-8-97ರಂದು ಮಧ್ಯಾಹ್ನ 1-00ಗಂಟೆಯಲ್ಲಿ ಸ್ವೀಕೃತವಾದ ಮಾಹಿತಿಯಂತೆ ಜಲಾಶಯದ ನೀರಿನ ಮಟ್ಟ 513.20 ಮೀಟರ್ ಆಗಿದ್ದು, ಜಲಾಶಯದಲ್ಲಿ ಸ್ವೀಕರಿಸುತ್ತಿರುವ ನೀರಿನ ಪ್ರಮಾಣ 2,68,650 ಕ್ಯೂಸೆಕ್ಸ್ ಹಾಗೂ ಹೊರೆಗೆ ಹರಿಯುತ್ತಿರುವ ನೀರಿನ ಪ್ರಮಾಣ 2,54,743 ಕ್ಯೂಸೆಕ್ಸ್‌ಗಳಾಗಿರುತ್ತದೆ. ಇದುವರೆವಿಗೂ 28 ಹಳ್ಳಿಗಳು ಪ್ರವಾಹದಿಂದ ಬಾಧಿತವಾಗಿದ್ದು, ಈ ಹಳ್ಳಿಗಳಲ್ಲಿನ ಗ್ರಾಮಸ್ಥರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ. ಇವರುಗಳಿಗೆ ವಾಸಿಸಲು ಷೆಡ್ಡುಗಳನ್ನು ಒದಗಿಸಲಾಗಿದೆ. ವೈದ್ಯಕೀಯ ಸಹಾಯ ಹಾಗೂ ಜೀವನಾವಶ್ಯಕ ಔಷಧಿಗಳನ್ನು ಸರಬರಾಜು ಮಾಡಲಾಗಿದೆ. ಜೀವನಾವಶ್ಯಕವಾದ ದವಸ-ಧಾನ್ಯಗಳನ್ನು ಸರಬರಾಜು ಮಾಡಲಾಗುತ್ತಿದೆ. ಯಾವುದೇ ಆಕಸ್ಮಿಕ ಪರಿಸ್ಥಿತಿಯನ್ನು ಎದುರಿಸಲು ಸರ್ಕಾರವು ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ. ಈ ಸನ್ನಿವೇಶ ಎದುರಿಸಲು ಸೈನ್ಯದ ಪಡೆಯ ಸಹಾಯ ಅಗತ್ಯವಿದ್ದಲ್ಲಿ ಅದನ್ನು ಉಪಯೋಗಿಸಲಾಗುವುದು.

ಆಲಮಟ್ಟಿ ಜಲಾಶಯದಲ್ಲಿ 25 ವರ್ಷಗಳಿಗೊಮ್ಮೆ ಮಹಾಪೂರ (ಅಂದರೆ ಸುಮಾರು 4 ಲಕ್ಷ ಕ್ಯೂಸೆಕ್ಸ್ ನೀರು ಹರಿದು ಬಂದರೆ) ಎದುರಿಸಬಹುದಾಷ್ಟು ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಮುಂಜಾಗ್ರತಾ ಕ್ರಮಗಳನ್ನು ಸಿದ್ಧಮಾಡಲಾಗಿದೆ.

ಬಾಗಲಕೋಟೆ ನಗರದ ಅಂಚಿನಲ್ಲಿರುವ ಕಟ್ಟಡಗಳು ಆಲಮಟ್ಟಿ ಜಲಾಶಯದ ನೀರಿನ ಮಟ್ಟವು 515 ಮೀಟರ್ ದಾಟಿದಾಗ ಬಾಧಿತವಾಗಲು ಆರಂಭವಾಗುತ್ತದೆ. ಸುಮಾರು 517 ಮೀಟರ್ ಎತ್ತರ ಮುಟ್ಟಿದಾಗ 615 ಕಟ್ಟಡಗಳು ಮತ್ತು 1089 ಕುಟುಂಬಗಳು ಬಾಧಿತವಾಗುತ್ತವೆ. ಈ ಎತ್ತರಕ್ಕೆ ನೀರು ಮಟ್ಟ ಏರಬೇಕಾದರೆ ಜಲಾಶಯದಲ್ಲಿ ಸುಮಾರು 4 ಲಕ್ಷ ಕ್ಯೂಸೆಕ್ಸ್ ನೀರು ಹರಿದು ಬರಬೇಕಾಗುತ್ತದೆ.

ಬಾಗಲಕೋಟೆ ಮತ್ತು ಸುತ್ತಮುತ್ತಲಿನ ಹಳ್ಳಿಗಳು ಪ್ರವಾಹ ಪೀಡಿತವಾದಲ್ಲಿ ಸಂತ್ರಸ್ಥರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲು 600 ತಾತ್ಕಾಲಿಕ ಷೆಡ್ಡುಗಳನ್ನು ನಿರ್ಮಿಸಲಾಗಿದೆ. ಪ್ರತಿ ಷೆಡ್ಡಿಗೂ ಒಂದು ಲೈಟ್ ಪಾಯಿಂಟ್ ಇಡಲಾಗಿದೆ. ನೀರಿನ ಸಂಗ್ರಹ ಕೇಂದ್ರಗಳಿಂದ ಕುಡಿಯುವ ನೀರನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗಿದೆ. ರಸ್ತೆಗಳನ್ನು ನಿರ್ಮಿಸಲಾಗಿದೆ. ಕುಟುಂಬಗಳ ಸ್ಥಳಾಂತರಕ್ಕೆ ಸಾಕಷ್ಟು ಟ್ರಾಕ್ಟರ್, ಟ್ರಕ್ ಮತ್ತು ಇತರೆ ವಾಹನಗಳನ್ನು ಇಡಲಾಗಿದೆ.

ಇದುವರೆವಿಗೂ ಪ್ರಸ್ತುತ ಆಲಮಟ್ಟಿ ಜಲಾಶಯ ಪ್ರದೇಶದಲ್ಲಿ ಭಾರಿ ಮಳೆಯಿಂದ ಉಂಟಾದ ಪ್ರವಾಹದಿಂದ ಯಾವುದೇ ಪ್ರಾಣ ಹಾನಿಯಾಗಿರುವುದಿಲ್ಲ. ಹಾಗೂ ಯಾವುದೇ ಮನುಷ್ಯ ಜಾನುವಾರುಗಳ ಹಾನಿಯಾಗದಂತೆ ಎಲ್ಲಾ ಮುನ್ನೆಚ್ಚರಿಗೆ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಮಾನ್ಯ ಅಧ್ಯಕ್ಷರೆ, ಈಗ ಮುಳುಗಡೆ ಪ್ರದೇಶದಲ್ಲಿ ಮುಳುಗಡೆ ಆಗಿರತಕ್ಕಂಥ ಇನ್ನು ಒಂದು ಹಳ್ಳಿಯ ಹೆಸರು ಮಾತ್ರ ಮಾನ್ಯ ಸದಸ್ಯರಾಗಿರತಕ್ಕಂಥ ಯಡಿಯೂರಪ್ಪನವರು ಹೇಳಿದರು. ಅದು ಯಾವುದು ಎಂದರೆ ಮಲ್ಲಾಪುರ. ಅದು ಒಂದೇ ಹಳ್ಳಿ ಅಲ್ಲ. ಇನ್ನೂ ಆರು ಹಳ್ಳಿಗಳು ಕೂಡ ಅಲ್ಲಿ ಸಬ್‌ಮರ್ಜ್ ಆಗುತ್ತಿವೆ. ಅದನ್ನು ನೋಟಿಫಿಕೇಷನ್ ಮಾಡತಕ್ಕಂಥ ಕಾರ್ಯಕ್ರಮವನ್ನು ನಾವು ಮಾಡುತ್ತೇವೆ. ಅದರ ಜೊತೆಗೆ ಬಾಗಲಕೋಟೆಯಲ್ಲಿ ಇರತಕ್ಕಂಥ ಅನ್ ಅಥರೈಸ್ಡ್ ಕಟ್ಟಡಗಳಿಗೆ ನೀವು ಕಾಂಪನ್ಸೇಷನ್ ಕೊಟ್ಟಿಲ್ಲವೆಂದು ಹೇಳುತ್ತಿದ್ದೀರಿ. ಈಗ ಈ ಅರ್ಬನ್ ಡೆವಲಪ್‌ಮೆಂಟ್ ಇಲಾಖೆ ಜೊತೆ ಚರ್ಚೆ ಮಾಡಿ ಅವರಿಗೆ ಕಾಂಪನ್ಸೇಷನ್ ಕೊಡತಕ್ಕಂಥ ಕೆಲಸವನ್ನು ಸರ್ಕಾರ ಮಾಡುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸಿ, ಈ ಪುನರ್ವಸತಿ ಕೇಂದ್ರಗಳು ಸರಿಯಾಗಿ ಇಲ್ಲ ಎಂದು ಎಲ್ಲಾ ಸದಸ್ಯರುಗಳು ಹೇಳುತ್ತಾರೆ. ಸ್ವಲ್ಪಮಟ್ಟಿಗೆ ನಾನು ಕೂಡ ಅದನ್ನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ, ಸುಮಾರು 50 ವರ್ಷಗಳು ಕಳೆದರೂ ಕೂಡ ನಾವು ಹಳ್ಳಿಗಳಿಗೆ ಕುಡಿಯುವ ನೀರು ಕೊಡುವುದಕ್ಕೆ ಆಗಿಲ್ಲ. 50 ವರ್ಷ ಕಳೆದರೂ ಇವತ್ತಿಗೂ ಹಳ್ಳಿಗಳಲ್ಲಿ ರಸ್ತೆ ಮಾಡುವುದಕ್ಕೆ ಆಗಿಲ್ಲ. ಆದರೆ ಒಂದೇ ಸಾರಿ ಎಲ್ಲಾ ಪುನರ್ವಸತಿ ಕೇಂದ್ರಗಳು ಬಹಳ ಸುಸಜ್ಜಿತವಾಗಲಿ ಎಂದು ನಾವು ತಿಳಿದುಕೊಳ್ಳುವುದು ಸ್ವಲ್ಪ ಕಷ್ಟದಾಯಕವಾದ ಕೆಲಸ. ಆದರೂ ಪುನರ್ವಸತಿ ಕೇಂದ್ರದಲ್ಲಿ ಏನೇನು ವ್ಯವಸ್ಥೆ ಇರಬೇಕು, ಹಿಂದೆ ಹಳ್ಳಿಗಳಲ್ಲಿ ಗೊಬ್ಬರ ಹಾಕುವುದಕ್ಕೆ ಗುಂಡಿಗಳು ಇರಲಿಲ್ಲ. ದನ ಕಟ್ಟುವುದಕ್ಕೆ ಜಾಗಗಳ ವ್ಯವಸ್ಥೆ ಇರಲಿಲ್ಲ. ಜನರು ಸತ್ತರೆ ಹೆಣ ಹೂಳುವುದಕ್ಕೆ ಜಾಗ ಇರಲಿಲ್ಲ. ಇವೆಲ್ಲವೂ ಹಂತಹಂತವಾಗಿ ಎಲ್ಲಾ ವ್ಯವಸ್ಥೆಯನ್ನು ಕೂಡ ಮಾಡುವುದಕ್ಕೆ ಸರ್ಕಾರ ಬದ್ಧ ಇದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನೂ ಕೂಡ ಅದೇ ಜಿಲ್ಲೆಯಿಂದ ಬಂದಿರತಕ್ಕಂಥ ಒಬ್ಬ ಮಂತ್ರಿಯಾಗಿದ್ದೇನೆ. ಅಲ್ಲಿ ಸಂಬಂಧಪಟ್ಟಿರತಕ್ಕಂಥ ಶಾಸಕರ ಜೊತೆ ಸಾಧ್ಯವಾದ ಮಟ್ಟಿಗೆ ಎಲ್ಲಾ ಪುನರ್ವಸತಿ ಸ್ಥಳಿಗಳಿಗೆ ನಾನು ಭೇಟಿ ಕೊಟ್ಟಿದ್ದೇನೆ. ಇಂತಿಂತಹ ತೊಂದರೆ ಇದೆ ಎಂದು ಜನರೂ ಕೂಡ ಹೇಳಿದ್ದಾರೆ. ಅದನ್ನು ನೀಗಿಸಬೇಕೆಂದೂ ಹೇಳಿದ್ದಾರೆ. ಈಗ ಅಲ್ಲಿ ಒಂದೇ ಓವರ್‌ಹೆಡ್ ಟ್ಯಾಂಕ್ ಕಟ್ಟುವುದಕ್ಕೆ ಆಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಲಿ ಮುಳುಗಡೆ ಆಗುವುದು ಗೊತ್ತಿಲ್ಲವೇ? ಅವರು ಬದುಕುವುದು ಹೇಗೆ?

ಶ್ರೀ ರಮೇಶ್ ಸಿ. ಜಿಗಜಿಣಗಿ : ನಿಮ್ಮ ಕಳಕಳಿಯನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ ಯೀಲ್ಡ್ ಆಗಿ 5-6 ಹಳ್ಳಿ 4(1) 6(1) ಆಗದೇ ಮುಳುಗಡೆಯಾಗಿದೆ ಎಂದು ಇವ್ಮೊತ್ತು ಅವರೇ ಹೇಳಿದರು. ಅದಕ್ಕೆ ನಾವೇನಾದರೂ ಪರಿಹಾರ ಕೊಡಿ ಎಂದು ಕೇಳುತ್ತಿದ್ದೇವೆಯೇ? ನಿಮ್ಮ ಹತ್ತಿರ ಮಾಹಿತಿ ಇದೆ ಸುಮಾರು 8-10 ಸಾವಿರ ಎಕರೆ 4(1) 6(1) ನೋಟಿಫಿಕೇಷನ್ ಆಗದೆ ಇರುವಂತಹ ಪ್ರದೇಶ ಮುಳುಗಡೆಯಾಗಿದೆ. ಬೆಳೆ ಎಲ್ಲಾ ನಾಶವಾಗಿದೆ. ಅವರಿಗೆ ತಕ್ಷಣ ಪರಿಹಾರ ಕೊಡುತ್ತೀರೋ? ನಾವು ಇದನ್ನು ಕೇಳಿದ್ದೇವೆಯೇ ಇಲ್ಲಿ ನಾವು ಏಕೆ ಚರ್ಚೆ ಮಾಡಬೇಕು ಹೇಳಿ?

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ನಾನು ಇಷ್ಟೇ ಹೇಳುವುದು, ಈಗ ಏನು ಆ ಜನರ ಬಗ್ಗೆ ಷಂತ್ರಸ್ತರ ಬಗ್ಗೆ ನಿಮಗೆ ಕಳಕಳಿ ಇದೆ ಅಷ್ಟೇ ಕಳಕಳಿ ನನಗೂ ಕೂಡ ಇದೆ. ಪುನರ್ವಸತಿ ಕೇಂದ್ರದ ಬಗ್ಗೆ ಅವರು ಇನ್ನೂ ಒಂದು ಮಾತು ಹೇಳಲಿಲ್ಲ. ಎಲ್ಲಾ ಪುನರ್ವಸತಿ ಕೇಂದ್ರಗಳಲ್ಲಿ ಅಪ್ರೋಚ್ ರೋಡ್‌ಗಳಲ್ಲಿ ಆಸ್‌ಫಾಲ್ಟ್ ಮಾಡಬೇಕೆಂದು ನಾವು ಯೋಚನೆ ಮಾಡುತ್ತಿದ್ದೇವೆ. ಆದರೆ ಹಾಗೆ ಅದನ್ನು ಬಿಟ್ಟುಬಿಡಬೇಕು ಎಂದು ಏನೂ ಇಲ್ಲ. ತಮಗೆ ಇನ್‌ಫರ್ಮೇಷನ್ ಬೇಕು ಎಂದರೆ ನಾನು ಕೊಡುತ್ತೇನೆ. ಆದರೆ ಒಂದು ಮಾತು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಏನಾದರೂ ಪರಿಹಾರ ಘೋಷಣೆ ಮಾಡದೇ ಇದ್ದರೆ ಚರ್ಚೆ ಮಾಡಿ ಏನು ಉಪಯೋಗ? 4(1) 6(1) ನೋಟಿಫಿಕೇಷನ್ ಆಗದೇ ಇರುವ ಕಡೆ 10 ಸಾವಿರ ಎಕರೆ ಮುಳುಗಡೆಯಾಗಿದೆ

ಶ್ರೀ ರಮೇಶ್ ಸಿ. ಜಿಗಜಿಣಗಿ : ನಾವು ಹೇಳುವ ತನಕ ಸಮಾಧಾನ ಇಲ್ಲ ಎಂದರೆ ಏನು ಹೇಳುವುದು? ನಾವು ಹೋದಾಗ ಇದನ್ನು ನಮ್ಮ ಗಮನಕ್ಕೆ ತೆಗೆದುಕೊಂಡು ಬಂದಿದ್ದಾರೆ. ನಾವು ಅಧಿಕಾರಿಗಳಿಗೆ ಎಷ್ಟು ಬೆಳೆ ನಾಶವಾಗಿದೆ. ಎಷ್ಟು ಬೆಳೆ ಮುಳುಗಿಹೋಗಿದೆ, ಅದರ ಬಗ್ಗೆ ಒಂದು ಸವಿಸ್ತಾರವಾದ ವರದಿಯನ್ನು ಕಳುಹಿಸಿ ಎಂದು ಹೇಳಿದ್ದೇವೆ. ಯಾರ್ಯಾರದು ಬೆಳೆ ಹಾನಿಯಾಗಿದೆ, ಕಾನೂನು ಪ್ರಕಾರ ಎಷ್ಟು ಕೊಡುವುದಕ್ಕೆ ಸಾಧ್ಯವಿದೆ ಅದನ್ನು ಕೊಡುತ್ತೇವೆ ಎಂದು ಹೇಳಿದ್ದೇವೆ. ಯಾರ್ಯಾರಿಗೆ ಹಾನಿಯಾಗಿದೆ ಅವರಿಗೆ ಕೊಡುತ್ತೇವೆ ಎಂದು ಹಳ್ಳಿಯಲ್ಲಿ ಹೇಳಿ ಬಂದಿದ್ದೇವೆ. ಪುನರ್ವಸತಿ ಕೇಂದ್ರದಲ್ಲಿ ಏನೇನು ವ್ಯವಸ್ಥೆಯಾಗಬೇಕು ಅದೆಲ್ಲಾ ವ್ಯವಸ್ಥೆಯನ್ನು ಮಾಡುವುದಕ್ಕೆ ಸರ್ಕಾರ ಸಿದ್ಧವಿದೆ. ನಾನು ಮೇಲಿನ ಮನೆಯಲ್ಲಿ ನಿನ್ನೆ ಕೂಡ ಉತ್ತರ ಕೊಟ್ಟಿದ್ದೇನೆ. ಮಾನ್ಯ ಸದಸ್ಯರಾದ ಜಿದ್ದಿಯವರು ಇದರ ಬಗ್ಗೆ ಪ್ರಶ್ನೆ ಹಾಕಿದ್ದರು. ಇನ್ನೊಂದು ಸಲ ಸಾಧ್ಯವಾದರೆ ಅಲ್ಲಿ ಸಂಬಂಧಪಟ್ಟ ಶಾಸಕರನ್ನು, ಕರೆದುಕೊಂಡು ನಾನು ಪುನರ್ವಸತಿ ಕೇಂದ್ರಕ್ಕೆ ಹೋಗಿಬರುತ್ತೇನೆ ಎನ್ನುವ ಮಾತನ್ನು ಹೇಳಿದ್ದೇನೆ. ಇನ್ನು ಮಾನ್ಯ ಯಡಿಯೂರಪ್ಪನವರು ಹಾರ್ಟಿಕಲ್ಚರ್ ಬೆಳೆಗೆ ಬಹಳ

ಕಡಿಮೆ ಹಣವನ್ನು ಕೊಟ್ಟಿದ್ದಾರೆ ಎನ್ನುವ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಮಾನ್ಯ ಜಯಕುಮಾರ್ ರವರು ಹೇಳಿದ ಹಾಗೆ 1991-92ರಲ್ಲಿ ಮಾಡಿರತಕ್ಕಂಥ ವ್ಯವಸ್ಥೆ ಇದು. ಈಗ ಮತ್ತೆ ಪರಿಷ್ಕರಣ ಮಾಡುವುದಕ್ಕೆ ಇನ್ನೊಂದು ಸಲ ಎಸ್ಟಿಮೇಟ್ ಎಂದರೆ ಒಂದು ಗಿಡಕ್ಕೆ ಎಷ್ಟು ಹಣ ಕೊಡಬಹುದು ಎನ್ನುವುದರ ಬಗ್ಗೆ ನಾವೆಲ್ಲರೂ ಕೂಡಿ ಮಾತನಾಡಿ, ಅಧಿಕಾರಿಗಳನ್ನು ಕರೆಯಿಸಿ ಅವರಿಗೆ ಒಂದು ನಿರ್ದೇಶನವನ್ನು ಕೊಡುತ್ತೇವೆಂದು ಹೇಳುತ್ತಾ, ಉಳಿದದ್ದು ಅಲ್ಲಿ ಏನೇ ತೊಂದರೆಗಳು ಇದ್ದರೂ ಅದನ್ನು ಬಗೆಹರಿಸುವುದಕ್ಕೆ ನಾವು ತಯಾರಿದ್ದೇವೆ. ಏಕೆಂದರೆ ನನಗೂ ಕೂಡ ಅನಿಸುತ್ತಿದೆ, ಅಲ್ಲಿ ಪುನರ್ವಸತಿ ಕೇಂದ್ರದಲ್ಲಿ ಹೇಗೆ ಆಗಿದೆ ಎಂದರೆ ನೂರಾರು ವರ್ಷಗಳಿಂದ ತಮ್ಮ ಮನೆತನ, ಊರು ಎಂದು ಕಟ್ಟಿರತಕ್ಕಂಥ ಆಸ್ತಿಯನ್ನು ಪುನಃ ಹೊಸದಾಗಿ ಕಟ್ಟುವುದಕ್ಕೆ ಎಷ್ಟು ಕಷ್ಟ ಎನ್ನುವುದು ನಮಗೂ ಗೊತ್ತಿದೆ. ಪುನರ್ವಸತಿ ಕೇಂದ್ರದಲ್ಲಿ ಜನಗಳಿಗೆ ಕೆಲಸ ಸಿಗುವುದಿಲ್ಲ. ಇರತಕ್ಕಂಥ ಎಲ್ಲಾ ನೀರಾವರಿ ಜಮೀನುಗಳನ್ನು ಕಳೆದುಕೊಂಡಿದ್ದಾರೆ. ಇದರ ಬಗ್ಗೆ ಕೂಡ ಸರ್ಕಾರ ಬಹಳ ಗಂಭೀರವಾಗಿ ಯೋಚನೆ ಮಾಡುತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ಈಗ ತಾವೇ ಇಲ್ಲಿ 96 ಗ್ರಾಮಗಳು ಮುಳುಗಡೆಗೆ ಬರುತ್ತಿವೆ ಎಂದು ಹೇಳುತ್ತಿದ್ದೀರಿ. 92 ಎಂದು ನೀವು ಹೇಳಿದಿರಿ. ನಮ್ಮ ನಾಯಕರು ಕೇಳಿದಾಗ 95 ಎಂದು ಹೇಳಿದಿರಿ. ಅದರ ಜೊತೆಗೆ ಸರ್ವೆ ಆಗದೇ ಉಳಿದಿರತಕ್ಕಂಥ ಆರು ಗ್ರಾಮಗಳೂ ಕೂಡ ಮುಳುಗಡೆ ವ್ಯಾಪ್ತಿಗೆ ಬರುತ್ತವೆ ಎಂದು ಹೇಳಿದಿರಿ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಅದು ಈ ವರ್ಷವಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಒಟ್ಟು ಮುಳುಗಡೆ ಆಗತಕ್ಕಂಥ ಗ್ರಾಮಗಳು 95 ಎಂದು ಹೇಳಿದ್ದೀರಿ. ಈ ಪುನರ್ವಸತಿ ಕಾರ್ಯಕ್ರಮಗಳನ್ನು ಎಲ್ಲಾ ಗ್ರಾಮಗಳಿಗೂ ಮಾಡಬೇಕಾಗುತ್ತದೆ. ಇವತ್ತು ಹಾಲಿ ಮುಳುಗಡೆಯಾಗಿರತಕ್ಕಂಥಾದ್ದು ಎಷ್ಟು ಗ್ರಾಮಗಳು ಎಂದು ನೀವು ಇದರಲ್ಲಿ ಹೇಳಲಿಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಒಟ್ಟು 29 ಗ್ರಾಮಗಳು.

ಶ್ರೀ ಕಾಗೋಡು ತಿಮ್ಮಪ್ಪ : ಈಗ ಮುಳುಗಡೆ ಆಗಿದ್ದಾವಲ್ಲ, ಈ ಮುಳುಗಡೆ ಆಗಿರತಕ್ಕಂಥ ಎಲ್ಲಾ ಗ್ರಾಮಗಳಿಗೆ ತಾವು ಪುನರ್ವಸತಿ ಕಲ್ಪಿಸಿ ಕೊಟ್ಟಿದ್ದರೆ ಎಲ್ಲೆಲ್ಲಿ ಮಾಡಿದ್ದೀರಿ? ದಯವಿಟ್ಟು ಹೇಳಿ? ಯಾವ್ಯಾವ ಗ್ರಾಮಕ್ಕೆ ಎಲ್ಲಿಲ್ಲಿ ಮಾಡಿದ್ದೀರಿ? ಅದರ ವ್ಯವಸ್ಥೆ ಏನಿದೆ? ನಾನು ಟಿ.ವಿಯಲ್ಲಿ ನೋಡಿದೆ. ಅಲ್ಲಿ ಶೆಡ್‌ಗಳನ್ನು ಕಟ್ಟಿದ್ದೀರಿ. ಮೇಲೆ ತಗಡು ಹಾಕಿ ಕೆಳಗಡೆ ಎಲ್ಲಾ ಮಾಡಿದ್ದೀರಿ. ಈ 28 ಗ್ರಾಮಗಳು ಈ ವರ್ಷ ನೀರು ಈ ಲೆವಲ್‌ಗೆ ಬಂದರೆ ಮುಳುಗಡೆಯಾಗುತ್ತದೆ ಎಂದು ಗೊತ್ತಾದದ್ದು ಯಾವಾಗ? ಅದು 3-4 ವರ್ಷಗಳಿಂದ ಗೊತ್ತಿದೆ. ಈ 28 ಗ್ರಾಮಗಳಿಗಾದರೂ ತಾವು ಪುನರ್ವಸತಿಯನ್ನು ಸಂಪೂರ್ಣವಾಗಿ ಮಾಡಬೇಕಾಗಿತ್ತು. ಆ ಕೆಲಸ ಮೊದಲು ಮಾಡಿದ್ದರೆ ಅದರ ಬಗ್ಗೆ ವಿವರವನ್ನು ದಯವಿಟ್ಟು ಕೊಡಿ. ಇನ್ನು ಉಳಿದಿರತಕ್ಕಂಥ ಗ್ರಾಮಗಳಿಗೆ ಯಾವರೀತಿಯಲ್ಲಿ

ಮಾಡಿದ್ದೀರಿ? ಅದರ ಜೊತೆಗೆ ತಾವು ಹೇಳಿದಿರಿ, ಹಿಂದೆ ಕೊಟ್ಟಿಗೆ ಇರಲಿಲ್ಲ, ಸಗಣಿ ಹಾಕುವುದಕ್ಕೆ ಗೊಬ್ಬರದ ಗುಂಡಿ ಇರಲಿಲ್ಲ, ಇದೆಲ್ಲಾ ಹೇಳಿದರು, ನೀವು ಪುನರ್ವಸತಿ ಕೇಂದ್ರವನ್ನು ಮಾಡತಕ್ಕಂಥ ಸಂದರ್ಭದಲ್ಲಿ ಏನು ಅವರಿಗೆ ಸೈಟ್ ಕೊಡಬೇಕಲ್ಲ, 30x40 ಅಳತೆ ನಿವೇಶನವನ್ನು ಕೊಟ್ಟು ಅವರಿಗೆ ಮನೆ ಒಳಗಡೆ ಗೊಬ್ಬರದ ಗುಂಡಿ ಮಾಡುವುದಕ್ಕೆ ಮಾಡಿದ್ದೀರೋ ಅಥರಾ 60x90 ಅಳತೆಯದು ಕೊಟ್ಟು ಹುಲ್ಲಿನ ಬಣವೆ, ಗೊಬ್ಬರದ ಗುಂಡಿ ಮಾಡುವುದಕ್ಕೆ ಸೈಟ್ ಕೊಟ್ಟಿದ್ದೀರೋ, ಯಾವ ಅಳತೆಯ ನಿವೇಶನವನ್ನು ಕೊಟ್ಟಿದ್ದೀರಿ ಹೇಳಿ? ಮಾನ್ಯ ಯಡಿಯೂರಪ್ಪನವರು ಹೇಳಿದರು, ಯಾವ ದಾಖಲೆ ಇಲ್ಲ, ಖಾನೆಸುಮಾರಿ ಇಲ್ಲ, ಸರ್ಕಾರಿ ಜಾಗದಲ್ಲಿ ಕಟ್ಟಿಕೊಂಡಂತಹ ಮನೆಗಳು ಇವೆ. ಕೂಲಿ ಮಾಡುವವರು ಇದ್ದಾರೆ, ಆ 28 ಗ್ರಾಮಗಳಲ್ಲಿ ಜಮೀನು ಇದ್ದವರಿಗೆ ಪರಿಹಾರ ಬರುತ್ತದೆ ಅಥವಾ ತಂದೆ ಜಾಗದಲ್ಲಿ ಇದ್ದರೆ ಪರಿಹಾರ ಬರುತ್ತದೆ. ಈ ಸರ್ಕಾರಿ ಜಾಗದಲ್ಲಿ ಮನೆ ಕಟ್ಟಿಕೊಂಡವರಿಗೆ, ಮತ್ತು ಕೂಲಿಕಾರರಿಗೆ ಮನೆ ಬಗ್ಗೆ ಏನಾದರೂ ಪರಿಹಾರ ಕೊಡಬೇಕಾಗುತ್ತದೆ. ಏಕೆಂದರೆ ವರಾಹಿ ಯೋಜನೆಯಲ್ಲಿ ಯಾರಿಗೆ ಮನೆ, ಯಾರಿಗೆ ಜಮೀನು ಮುಳುಗಡೆ ಯಾಗಿಲ್ಲ, ಯಾರು ವ್ಯವಸಾಯದ ಕೂಲಿಕಾರರು ಇರಬಹುದು ಅಥವಾ ಕರಕುಶಲ ಕರ್ಮಿಗಳು ಇರಬಹುದು ಅವರಿಗೆ ಪುನರ್ವಸತಿ ಕಾಂಪನ್ಸೇಷನ್ ಎಂದು ಕೊಟ್ಟಿದ್ದಾರೆ. 10 ಸಾವಿರ 15 ಸಾವಿರ 20 ಸಾವಿರರ ಕುಟುಂಬದ ಲೆಕ್ಕದ ಮೇಲೆ ಕೊಟ್ಟಿದ್ದಾರೆ. ಇನ್ನು ಕೃಷಿ ಕಾರ್ಮಿಕರಿಗೆ, ಕುಶಲಕರ್ಮಿಗಳಿಗೆ ಭೂಮಿ ಇಲ್ಲದಂತಹವರು ಯಾರಿದ್ದಾರೆ ಅವರಿಗೆ ಯಾವರೀತಿ ಪರಿಹಾರ ಕೊಟ್ಟಿದ್ದೀರಿ, ಅವನು ಮನೆ ಬಿಟ್ಟು ಹೊರಡಬೇಕಾದರೆ, ಅವನು ಎರಡು ಗಡಿಗೆ ಇಟ್ಟುಕೊಂಡು ಹೋಗಬೇಕಾ? ಅಥವಾ ಮನೆ ಕಟ್ಟಿಕೊಂಡು ಏನಾದರೂ ಇರಬೇಕಾ? ಅವನಿಗೆ ಯಾವರೀತಿ ಪುನರ್ವಸತಿ ಮಾಡುತ್ತೀರಿ? 28 ಗ್ರಾಮಗಳಲ್ಲಿ ಅಂತಹವರು ಎಷ್ಟು ಜನ ಇದ್ದಾರೆ? ನೀವು ಲೆಕ್ಕ ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ತಾವು ಅನುಮತಿಯನ್ನು ಕೊಡಬೇಕು. ಏಕೆಂದರೆ ನಾನು ಕೇಳಿದಂತಹ ಕ್ಲಾರಿಫಿಕೇಷನ್‌ಗೆ ಯಾವುದೇ ಉತ್ತರ ಇಲ್ಲ. ಅವರು ಏನಾದರೂ ಕೇಳಿಕೊಳ್ಳಲಿ ನಾನು ಒಂದೇ ಮಾತನ್ನು ಕೇಳುತ್ತೇನೆ. ಇವತ್ತು ತಾವು ಆ ಆಲಮಟ್ಟಿಯನ್ನು ಎತ್ತರಕ್ಕೆ ಕಟ್ಟಿದಾಗ ಯಾವ ಪ್ರದೇಶ ಮುಳುಗಡೆಯಾಗುತ್ತದೆ ಅವರಿಗೆ ಒಂದೇ ಗಂಟೆನಲ್ಲಿ ಪರಿಹಾರ ಕೊಡಿ ಆಗ ಅವನು ಬದುಕಿಕೊಳ್ಳುತ್ತಾನೆ. ಸೈಟ್ ಇರಬಹುದು, ಪರಿಹಾರ ಇರಬಹುದು. ಎರಡನೆಯದು ತಾವೇ ಹೇಳಿದ್ದೀರಿ 1992ರಲ್ಲಿ ಮಾಡಬೇಕಾದ ಹಾರ್ಟಿಕಲ್ಚರ್ ಕೆಲಸ ಈಗ ನಾವು ಮಾಡುತ್ತೇವೆ ಎಂದರೆ ತಾವು ಏನು ಮಾಡುತ್ತೀರಿ, ಇವತ್ತು ನಾನು ರೈತರ ಹಿತದೃಷ್ಟಿಯಿಂದ ಒಂದು ಮೂಲೆಯಲ್ಲಿ ನಿಂತುಕೊಳ್ಳುತ್ತೇನೆ. ಮತ್ತೆ ಸದನ ಮಧ್ಯಾಹ್ನ ಪ್ರಾರಂಭವಾದ ನಂತರವೂ ಸಾಯಂಕಾಲದವರೆಗೆ ನಾನು ನಿಂತುಕೊಂಡು ನನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತೇನೆ. ಈಗ ನಾನು ಕುರ್ಚಿ ಮೇಲೆ ಕೂಡುವುದಿಲ್ಲ. ಆ ಮೂಲೆಯಲ್ಲಿ ನಿಲ್ಲುತ್ತೇನೆ. ಇವತ್ತು 3 ಗಂಟೆಯ ತನಕ ಪ್ರಶ್ನಾವಳಿ ಸಮಯವನ್ನು ರದ್ದು ಮಾಡಿ ನಾವು ಚರ್ಚಿಸುತ್ತಿದ್ದೇವೆ. ತಾವು ಒಂದಕ್ಕೂ ಸರಿಯಾಗಿ ಉತ್ತರ ಕೊಡುತ್ತಾ ಇಲ್ಲ ಎಂದರೆ ಏನು? ಯಾವುದೇ ಹಳೆಯ ಕಥೆಯನ್ನು ತಂದು ಹೇಳುತ್ತಿದ್ದಾರೆ, ರೆಡಿಯಾದ ಉತ್ತರವನ್ನು

ಕೊಟ್ಟು ಸುಮ್ಮನೆ ಇರುವುದಾದರೆ, ಕೇವಲ ವರದಿ ಒಪ್ಪಿಸಲು, ತಮ್ಮ ಹತ್ತಿರ ಭಿಕ್ಷೆ ಬೇಡಲು ಬಂದಿಲ್ಲ. ಅದಕ್ಕಾಗಿ ಪ್ರತಿಭಟನೆಯನ್ನು ವ್ಯಕ್ತಪಡಿಸಲು ನಾನು ಮೂಲೆಯಲ್ಲಿ ಹೋಗಿ ನಿಲ್ಲುತ್ತೇನೆ.

(ಯಡಿಯೂರಪ್ಪನವರು ಸದನದ ಎಡಭಾಗದ ಮೂಲೆಯಲ್ಲಿ ಹೋಗಿ ನಿಂತರು)

ಶ್ರೀ ಕೆ.ಎನ್. ನಾಗೇಗೌಡ : ಅವರು ಉತ್ತರವನ್ನು ಹೇಳುತ್ತಿದ್ದಾರೆ. ಇನ್ನು ಅವರ ಉತ್ತರ ಪೂರ್ಣವಾಗಿಲ್ಲ, ದಯವಿಟ್ಟು ಕೇಳಬೇಕು ಅವರು ಅಲ್ಲೇ ನಿಂತು ಕೇಳಲಿ ಅಭ್ಯಂತರ ಇಲ್ಲ, ಕಿವಿಯೊಂದನ್ನು ಈ ಕಡೆಗೆ ಕೊಟ್ಟರೆ ಸಾಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಂಥ ಬೇಜವಾಬ್ದಾರಿ ಸದನಕ್ಕೆ ಬಂದನೆಲ್ಲ ಎಂದು ವಿಷಾದಿಸಿ ಸಾಯಂಕಾಲದವರೆಗೆ ನನಗೆ ನಾನು ದಂಡನೆಯನ್ನು ವಿಧಿಸಿಕೊಳ್ಳುತ್ತೇನೆ.

ಅಧ್ಯಕ್ಷರು : ಸದನ ಚೆನ್ನಾಗಿದೆ, ಒಂದು ನಿಮಿಷ ನಿಲ್ಲಿ, ನೀವು ಹೀಗೆ ಮಾಡಿದರೆ ನಾನು ಹೇಗೆ ಮಾಡುವುದು? ಬನ್ನಿ ವ್ಯವಸ್ಥೆ ಮಾಡೋಣ, ದಯಮಾಡಿ ಹಾಗೆ ಮಾಡಬೇಡಿ. ಯಡಿಯೂರಪ್ಪನವರೇ ನಾನು ಈ ವಿಚಾರವನ್ನು ಲಘುವಾಗಿ ತೆಗೆದುಕೊಳ್ಳುತ್ತಾ ಇಲ್ಲ. ತಮ್ಮ ಬೇಸರ ನಮಗೆ ಅರ್ಥವಾಗುತ್ತದೆ. ದಯಮಾಡಿ ತಾವು ಬಂದು ಕುಳಿತುಕೊಳ್ಳಿ. ತಾವು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡಿಸಲು ಪ್ರಯತ್ನ ಮಾಡುತ್ತೇನೆ. ದಯಮಾಡಿ ಬನ್ನಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಡಿಯೂರಪ್ಪನವರು ಬೇಜಾರು ಪಟ್ಟುಕೊಂಡು ಆ ಮೂಲೆಯಲ್ಲಿ ಹೋಗಿ ನಿಂತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಯಡಿಯೂರಪ್ಪನವರು ಬಹಳ ಕಳಕಳಿಯಿಂದ ಅಲ್ಲಿ ಹೋಗಿ ನಿಂತಿದ್ದಾರೆ. ಏಕೆ ನಿಂತರು ಎಂದು ನನಗೆ ಅನುಮಾನ ಬಂತು. ನಿಂತದ್ದು ಒಳ್ಳೆಯದೆ. ನಾನು ಧರಣಿ ಮಾಡುವುದಿಲ್ಲ ಎಂದು. ಅವರು ಒಂದು ಪ್ರಮಾಣವನ್ನು ಮಾಡಿದ್ದಾರೆ. ಈ ಅಧಿವೇಶನದಲ್ಲಿ ಧರಣಿ ಮಾಡುವುದಿಲ್ಲ ಎಂದು ಹೇಳಿ ಅಲ್ಲಿ ಧರಣಿ ಮಾಡಲು ಹೋದರು.

ಅಧ್ಯಕ್ಷರು : ಅವರ ನೋವು ನಮಗೆ ಅರ್ಥವಾಗುತ್ತದೆ. ನಾವು ಅದನ್ನು ತೀರಾ ಹಾಸ್ಯ ರೀತಿಯಲ್ಲಿ ತೆಗೆದುಕೊಳ್ಳಬಾರದು. ಅವರು ಏಕೆ ಆ ಮಾತು ಹೇಳಿದ್ದರು ಎಂದರೆ ಪ್ರತಿಸಲ ಏನು ಒಂದು ಕಾರಣಕ್ಕೆ ಧರಣಿ ಎಂದು ತೆಗೆದುಕೊಂಡು ಸಮಯ ವ್ಯರ್ಥವಾಗುತ್ತದೆ. ಕಾರ್ಯಕಲಾಪಗಳು ನಡೆಯುವುದಿಲ್ಲ ಎಂಬ ಅಪಕೀರ್ತಿಗೆ ಪಾಲಾಗುವುದು ಬೇಡ, ಆದ್ದರಿಂದ ಈ ಅಧಿವೇಶನದ ಮಟ್ಟಿಗೆ ನಾವು ಧರಣಿಯನ್ನು ಮಾಡುವುದಿಲ್ಲ ಎಂದು ಹೇಳಿದರು. ಇನ್ನೇನು ಸಭಾತ್ಯಾಗ ಮಾಡಿದರೆ ಸಾಕು ಎಂದು ಅವರು ಹೊಸ ಮಾರ್ಗ ಹುಡುಕಿದ್ದಾರೆ. ಅದಕ್ಕೆ ನಾನು ಹೇಳುವುದು ಏನು ಎಂದರೆ, ಯಾವುದೇ ಒಂದು ಸಂದರ್ಭದಲ್ಲಿ ವಿರೋಧಪಕ್ಷದ ಸದಸ್ಯರಾಗಲಿ, ಯಾವುದೆ ಸದಸ್ಯರಾಗಲಿ, ಬೇಸರಗೊಂಡಾಗ, ಪ್ರತಿಭಟನೆ ಮಾಡಿದಾಗ, ತೀವ್ರವಾದಂಥ ಭಾವನೆಯನ್ನು ವ್ಯಕ್ತಪಡಿಸಿದಾಗ, ಸರ್ಕಾರ ಅದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ನಾಯಕರು ಅಲ್ಲಿ ಹೋಗಿ ನಿಂತರು, ಹಾಗೆ ಹೋಗಿ ಎಂದು ಹೇಳುವುದು ಸರಿಯಲ್ಲ. ನಾನು ಈಗ ಮಂತ್ರಿಗಳಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆ

ಎಂದರೆ, ಇದು ಬಹಳ ಗಂಭೀರವಾದ ವಿಚಾರ, ಅವರು ಏನು ಪ್ರಸ್ತಾಪ ಮಾಡಿದ್ದಾರೆ. ತಾವು ತಮ್ಮ ಸಿದ್ಧಪಡಿಸಿದ ಹೇಳಿಕೆಯನ್ನು ಓದಿದ್ದೀರಿ. ಜೊತೆಗೆ ಅವರು ಪ್ರಸ್ತಾಪ ಮಾಡಿದ ಯಾವ ವಿಷಯಗಳನ್ನು ತಾವು ಕವರ್ ಮಾಡಿಲ್ಲ ಅದನ್ನು ದಯಮಾಡಿ you please try to meet those points also.

ಶ್ರೀ ರಮೇಶ್ ಸಿ. ಜಿಗಜಿಣಗಿ : ಹಾರ್ಟಿಕಲ್ಚರ್ ಕ್ರಾಪ್‌ಗೆ ಇದು ಕೊಡತಕ್ಕಂಥ ಪರಿಹಾರ ಬಹಳ ಕಡಿಮೆ ಎಂದು ಹೇಳಿದರು. ಆದರೆ ಇಲ್ಲೇ ನಿಂತು ನಾನು 200 ರೂಪಾಯಿಗಳನ್ನು ಕೊಡುತ್ತೇನೆ ಎಂದು ಹೇಳಿದರೆ ಅದು ಸರಿಯಾಗುವುದಿಲ್ಲ, ಅವರಿಗೂ ಗೊತ್ತಿದೆ.

ಅಧ್ಯಕ್ಷರು : ನಿರ್ದಿಷ್ಟವಾಗಿ ಯಡಿಯೂರಪ್ಪನವರೇ ತಮಗೆ ಯಾವ ವಿಚಾರ ಬೇಕು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಪ್ರೋಗ್ರಾಮ್ ಅವರಿಗೆ ಬರುತ್ತದೆ.

ಶ್ರೀ ಕೆ.ಎನ್. ನಾಗೇಗೌಡ : ಆಲಮಟ್ಟಿಯಲ್ಲಿ ಅಕ್ವಿಜೆಷನ್ ಮಾಡಿಕೊಳ್ಳಬೇಕಾದ ಭೂಮಿ 3,52,382 ಎಕರೆ ಅಷ್ಟನ್ನು ನಾವು ಸ್ವಾಧೀನಪಡಿಸಿಕೊಳ್ಳಬೇಕಾದದ್ದು. ಅದರಲ್ಲಿ, ಈವರೆಗೆ ಅಂದರೆ 31-3-97ರವರೆಗೆ 1,54,552 ಎಕರೆ ಎಷ್ಟನ್ನು ನಾವು ಸ್ವಾಧೀನದಲ್ಲಿ ತೆಗೆದುಕೊಂಡಿದ್ದೇವೆ. ಬಾಗಲಕೋಟೆಯಲ್ಲಿ 4 ಸಾವಿರಕ್ಕಿಂತ ಹೆಚ್ಚಿಗೆ ಜಮೀನನ್ನು ನಾವು ಸ್ವಾಧೀನಪಡಿಸಿಕೊಂಡು 1,200 ಎಕರೆಗೆ ಫಸ್ಟ್ ಯೂನಿಟ್ ಎಂದು ಲೇಔಟನ್ನು ಮಾಡಿದ್ದೇವೆ. ಆ ಲೇಔಟ್‌ನಲ್ಲಿ ಎಲ್ಲ ಕೆಲಸಗಳನ್ನು ಪ್ರಾರಂಭಮಾಡಿದ್ದೇವೆ. ಬಾಗಲಕೋಟೆಗೆ ಇಲ್ಲಿಯವರೆಗೆ 60 ಕೋಟಿ ರೂಪಾಯಿಗಳು ಮಾತ್ರ ಖರ್ಚಾದದ್ದು, ಈ ವರ್ಷ ಒಂದು ನೂರು ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಅವರು ಯಾವಾಗ ಮನೆ ಕಟ್ಟಿಕೊಡುತ್ತಾರೆ ಎನ್ನುವಂತಹ ಮಾತನ್ನು ಹೇಳಿದರು. ಈ ಒಂದು ವರ್ಷದ ಪರಿಹಾರದಲ್ಲಿ ನೂರು ಕೋಟಿಯಲ್ಲಿ 1,089 ಕುಟುಂಬಗಳಿಗೆ ನಾವು 70 ಕೋಟಿ ರೂಪಾಯಿಗಳ ಪರಿಹಾರವನ್ನು ಈ ವರ್ಷವೇ ಕೊಡಬೇಕು, ಇನ್ನು ಉಳಿದಂತಹ ನೂರು ಕೋಟಿಯಲ್ಲಿ 30 ಕೋಟಿಯನ್ನು ಸಿವಿಲ್ ಕೆಲಸಕ್ಕಾಗಿ ಇಟ್ಟುಕೊಳ್ಳಬೇಕೆಂದು ಹೇಳಿದ್ದೇವೆ. ಇಲ್ಲಿವರೆಗೆ ಆರ್ ಅಂಡ್ ಆರ್ ಗೆ ನಾವು ಬರೀ ರಿಹೆಬಿಲಿಟೇಷನ್ ಆಫ್ ರೀಕನ್‌ಸ್ಟ್ರಕ್ಷನ್‌ಗೆ 150 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮತ್ತು 250 ಕೋಟಿ ರೂಪಾಯಿಗಳನ್ನು ಲ್ಯಾಂಡ್ ಪರಿಹಾರಕ್ಕೆ ಕೊಟ್ಟಿದ್ದೇವೆ. 400 ಕೋಟಿ ರೂಪಾಯಿಗಳನ್ನು ಕಳೆದ 1967ರಿಂದ ಇಲ್ಲಿಯವರೆಗೆ ಕೊಟ್ಟಿರುವುದು. ಆದರೆ ಈ ಒಂದು ವರ್ಷಕ್ಕೆ ನಾವು 600 ಕೋಟಿ ರೂಪಾಯಿಗಳು ಪರಿಹಾರಕ್ಕೆ ಒಂದು ಮಾರ್ಕ್ ಮಾಡಿದ್ದೇವೆ . 1,200 ಕೋಟಿ ರೂಪಾಯಿಗಳಲ್ಲಿ ಬಾಗಲಕೋಟೆಯನ್ನು ಸೇರಿಸಿಕೊಂಡು ಈ ಒಂದು ವರ್ಷದಲ್ಲಿ 600 ಕೋಟಿ ರೂಪಾಯಿಗಳ ಖರ್ಚುಮಾಡಬೇಕೆಂದು ಆಲೋಚನೆ ಇಟ್ಟುಕೊಂಡಿದ್ದೇವೆ. ಕಾಗೋಡು ತಿಮ್ಮಪ್ಪನವರು ಹೇಳಿದಹಾಗೆ ಈಗ 28 ಅಥವಾ 29 ಹಳ್ಳಿಗಳು ಏನು ಮುಳುಗಡೆಯಾಗಿವೆ ಅವರು 10 ವರ್ಷದಿಂದ ಪರಿಹಾರ ತೆಗೆದುಕೊಂಡಿರುವುದು, ನಮ್ಮ ರಾಜಶೇಖರ್, ಜೋಶಿಯವರು ತೋಳಬರತ್ತೆ, ತೋಳಬರುತ್ತೆ ಎಂದು ಬಹಳ ಚೆನ್ನಾಗಿ ಹೇಳಿದ್ದರು. ತೋಳ ಬರುವಾಗ ಯಾರು ಭಯಬೀಳಲಿಲ್ಲ, ಈಗ ತೋಳ ಬಂದಿದೆ ಈಗ ಎಲ್ಲರಿಗೂ ಭಯವಾಗಿದೆ ಎಂದು ಆಲಮಟ್ಟಿ

ಕಟ್ಟುತ್ತಾರೆ ಎಂದು ಜನ ಯಾರು ನೆನಸೇ ಇರಲಿಲ್ಲ, ಆವಾಗ್ಗೆ ಇದು ತಯಾರು ಆಗಿರಲಿಲ್ಲ ಆಲಮಟ್ಟಿ ಡ್ಯಾಂ ಬರುತ್ತದೆ ಎಂದು ಭಾವನೆ ಬಂದದ್ದು ನಾಲ್ಕು ಐದು ವರ್ಷಗಳಿಂದ ಈಚೆಗೆ. ಅಲ್ಲಿ ಅವರು ಎಂಟು ಹತ್ತು ವರ್ಷಗಳಿಂದ ಪರಿಹಾರ ತೆಗೆದುಕೊಂಡು ಅಲ್ಲೇ ಇದ್ದಾರೆ. ಈಗ 509 ಅಡಿ ಬಂತು. ಇದು ಬಂದ ತಕ್ಷಣ ನೀರಿನಿಂದ ಮುಳುಗಡೆಯಾಗಲು ಪ್ರಾರಂಭವಾಯಿತು ಈಗ ಬಾಗಲಕೋಟಿಯವರೆಗೆ ಹೋಗಿ 60-70 ಮನೆಗಳು ಮುಳುಗಡೆಯಾಗಿವೆ. ಯಾವಾಗ ನೀರು 512-513ರವರೆಗೆ ಬಂದಿದೆ. ಆಗಲೇ ಈ 30 ಹಳ್ಳಿಗಳಿಗೆ ಪರಿಹಾರ ಕೊಟ್ಟಿದ್ದೇವೆ. ಆದರೂ ಸಹಿತ ಅವರಿಗೆ ತಾತ್ಕಾಲಿಕವಾಗಿ ಶೆಡ್ಡಗಳನ್ನು ಹಾಕಿದ್ದೇವೆ. ಅವರು ಬಹಳ ವರ್ಷಗಳಿಂದ ಅಲ್ಲಿಗೆ ಹೋಗಬೇಕಾಗಿತ್ತು ಆದರೆ ಅಲ್ಲಿಗೆ ಅವರು ಹೋಗಲಿಲ್ಲ. ಎಲ್ಲಾ ಮಾಹಿತಿಗಳು ಇವೆ ತಮಗೆ ಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಆಯಿತು, ಅವರಿಗೆ ಎಲೆಲ್ಲಿ ಕೊಟ್ಟಿದ್ದೀರಿ, ಯಾವ ಊರುಗಳಲ್ಲಿ ಏನೇನು ಮಾಡಿಕೊಟ್ಟಿದ್ದೀರಿ ಅದರ ವಿವರ ಕೊಡಿ. ನಿಮಗೆ ಒಂದು ಮಾತು ಹೇಳುತ್ತೇನೆ, ಬಾಗಲಕೋಟೆ ಅದು ಅರ್ಬನ್ ಡೆವಲಪ್‌ಮೆಂಟ್‌ಗೆ ಸೇರಿಕೊಂಡಿತ್ತ. ಮೊನ್ನೆ ಕ್ಯಾಬಿನೆಟ್ ತೀರ್ಮಾನ ಮಾಡಿ ಅದನ್ನು ರೆವಿನ್ಯೂ ಇಲಾಖೆಗೆ ವರ್ಗಾವಣೆ ಮಾಡಿ, ಬಾಗಲಕೋಟಿ ಅಥಾರಿಟಿಯವರು ಮತ್ತು ನಾವು ಎಲ್ಲ ಕುಳಿತುಕೊಂಡು ತೀರ್ಮಾನ ಮಾಡಿದ್ದೇವೆ. ಅವರು 24 ಬೇಡಿಕೆಗಳನ್ನು ಇಟ್ಟಿದ್ದರು. ಇದರಲ್ಲಿ ಒಂದಕ್ಕೆ 500 ಕೋಟಿ ರೂಪಾಯಿಗಳ ಪರಿಹಾರವನ್ನು ಕೊಡಬೇಕಾಗುತ್ತದೆ. ಈ ಬೇಡಿಕೆಗೆ ನಾವು ಒಪ್ಪಿಕೊಂಡಿದ್ದೇವೆ. ಒಂದು ಸವಕಳಿಗೆ ಬಿಟ್‌ವಿನ್ ನೂರು 150 ಕೋಟಿ ರೂಪಾಯಿಗಳ ಎಸ್ಟಿಮೇಟ್ ಮಾಡಿದ್ದೇವೆ. ನೂರ ರಿಂದ ನೂರಾಐವತ್ತು ಕೋಟಿ ಇದು ಕ್ಯಾಬಿನೆಟ್ ತೀರ್ಮಾನವಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಕೇಳುವುದು ಏನೆಂದರೆ, ನೀವು ಏನು ಮಾಡಿದ್ದೀರಿ ಅದನ್ನು ಆಮೇಲೆ ಹೇಳಿ ಎಂದು ಹೇಳಿದೆ. ನಾನು ರಮೇಶ್ ಜಿಗಜಿಣಗಿಯವರಿಗೆ ಕೇಳಿದ್ದು ಏನು ಎಂದರೆ, ಇದರಲ್ಲಿ ಎರಡು ಪ್ರೋಗ್ರಾಮ್ ಇವೆ. ಒಂದು resettlement and rehabilitation programme ಆಲಮಟ್ಟಿ ಕೆಳಗಡೆ ಮುಳುಗಡೆಯಾಗುವಂಥ ಜನರಿಗೆ ಕೊಡುವುದು. ಅದೇ ಜನರಿಗೆ ಈಗ ಹೆಚ್ಚಿನ ಮಳೆ ಬಂದು ಆ ಪ್ರವಾಹದಲ್ಲಿ ಪುನಃ ಏನು ಮುಳುಗಡೆಯಾಗಿವೆ ಅವರಿಗೆ ರೆವಿನ್ಯೂ ಇಲಾಖೆಯಿಂದ ಸಹಾಯ ಕೊಡತಕ್ಕಂಥದ್ದು ಇನ್ನೊಂದು.

1.20 ಪಿ.ಎಂ

ಆಮೇಲೆ, ಈಗತಾನೇ ತಾವು 177 ಸೆಂಟರ್‌ಗಳನ್ನು ಗುರುತು ಮಾಡಲಾಗಿದೆ ಎಂದು ಹೇಳಿದಿರಿ. ಇದನ್ನು ಮಾಡಿದ ಮೇಲೆ ಅದಕ್ಕೆ ನಿಗದಿತವಾದಂಥ ಹಣವನ್ನು ತಾವು ಇಡುತ್ತೀರಿ. ಪ್ರತಿಯೊಂದು ಸೆಂಟರ್ಸ್‌ಗೆ ರಸ್ತೆ ಮಾಡಬೇಕು, ನೀರಿನ ವ್ಯವಸ್ಥೆ ಮಾಡಬೇಕು, ಸ್ಕೂಲ್ ಮಾಡಬೇಕು. ಈ ಸೆಂಟರ್‌ಗಳಲ್ಲಿ ಆಗತಕ್ಕಂಥ ಅಭಿವೃದ್ಧಿ ಕಾರ್ಯಗಳು 52 ಸಾವಿರ ಹಳ್ಳಿಗಳಲ್ಲಿ ಆಗತಕ್ಕಂಥ ಕೆಲಸಗಳಿಗೆ ಹೋಲಿಸತಕ್ಕಂಥದ್ದಲ್ಲ. ಎಲ್ಲಾ ಹಳ್ಳಿಗಳಿಗೂ ಕೂಡ ನಾವು ನೀರಿನ ವ್ಯವಸ್ಥೆ ಮಾಡಿಲ್ಲ,

ರಸ್ತೆ ಮಾಡಿಲ್ಲ, ಇನ್ನೂ ಅಲ್ಲಿ ಸ್ಕೂಲ್ ಇಲ್ಲ ಎಂದು ಅದಕ್ಕೂ ಇದಕ್ಕೂ ಹೋಲಿಸುವುದಕ್ಕೆ ಸಾಧ್ಯವಿಲ್ಲ. ಇದು ವಿಶೇಷ ಕಾರ್ಯಕ್ರಮವಾಗಿದ್ದು, ಈ ವಿಶೇಷ ಕಾರ್ಯಕ್ರಮಕ್ಕೆ ವಿಶೇಷವಾಗಿ ಸರ್ಕಾರ ಮಂಜೂರಾತಿ ಕೊಟ್ಟಿದೆ, ಸದನ ಹಣ ಕೊಟ್ಟಿದೆ. ಆ ರೀತಿ ಕೊಟ್ಟಂಥ ಹಣದಲ್ಲಿ ತ್ವರಿತಗತಿಯಿಂದ ಕೊಡಬೇಕಾದಂಥ ಕಾರ್ಯಕ್ರಮಗಳನ್ನು, ಕಲ್ಪಿಸಬೇಕಾದಂಥ ನಾಗರೀಕ ಸೌಲಭ್ಯಗಳನ್ನು ಏಕೆ ಕೊಟ್ಟಿಲ್ಲ ಎನ್ನತಕ್ಕಂಥ ಪ್ರಶ್ನೆಯನ್ನು ತಮಗೆ ಕೇಳಬಯಸುತ್ತೇನೆ. ಈಗ 28 ಹಳ್ಳಿ ಮುಳುಗಡೆಯಾಗಿವೆ ಎಂದಿರಲ್ಲ ಅವರಿಗೆ ಈ ಸೌಲಭ್ಯವನ್ನು ಕೊಟ್ಟಿರಾ? ಇದು ಒಂದನೆಯದು. ಎರಡನೆಯದು ತಾವು ಹೇಳಿದಿರಿ ನೂರು ಕೋಟಿ ರೂಪಾಯಿಗಳನ್ನು ಕೊಟ್ಟೆ ಎಂದು. ಮತ್ತೆ 1967 ರಿಂದ ಇಲ್ಲಿಯವರೆಗೆ 60 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರು ನಾನು ಈಗ ಬಂದು 60 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ ಎಂದು ಹೇಳಿದಿರಿ. ಸ್ವಾಮಿ ನಿಮ್ಮ 60 ಕೋಟಿ ರೂಪಾಯಿಗಳಲ್ಲಿ ಎಷ್ಟು ಎಕರೆ ಜಮೀನನ್ನು ಅಕ್ವೈರ್ ಮಾಡಿಕೊಂಡಿರಿ, ಹಿಂದೆ ಎಷ್ಟು ಜಮೀನು ಅಕ್ವೈರ್ ಆಗಿದೆ ಎಂಬುದನ್ನು ನೋಡಿ. ತಾವು ಯಾವಾಗಲು ಬರೀ ದುಡ್ಡಿನ ಬಗ್ಗೆ ಮಾತನಾಡಬೇಡಿ. ಕ್ವಾಲಿಟಿ ಮತ್ತು ಕ್ವಾಂಟಿಟಿ ಆಫ್ ವರ್ಕ್ ಬಗ್ಗೆಯೂ ಮಾತನಾಡಿ. ಜೊತೆಗೆ ಕೆಲಸದ ಬಗ್ಗೆಯೂ ಅಷ್ಟೆ. ಅಧ್ಯಕ್ಷರ, ಹಿಂದೆ ಒಂದು ಎಕರೆಗೆ ಹತ್ತು ಸಾವಿರ ರೂಪಾಯಿ ಇದ್ದರೆ ಇವೊತ್ತು ಒಂದು ಎಕರೆಗೆ ಒಂದು ಲಕ್ಷ ರೂಪಾಯಿ ಇದೆ. ಅಂದರೆ ಇವೊತ್ತಿನ ದಿವಸ ನೀವು ಹತ್ತು ಎಕರೆ ಅಕ್ವೈರ್ ಮಾಡಬೇಕಾದರೆ ಹತ್ತು ಲಕ್ಷ ರೂಪಾಯಿಗಳು ಬೇಕು. ಹಿಂದೆ ಅದೇ ಒಂದು ಲಕ್ಷದಲ್ಲಿ ಹತ್ತು ಎಕರೆ ಬರುತ್ತಿತ್ತು. ಅದಕ್ಕಾಗಿ ಒಂದಕ್ಕೊಂದು ಹೋಲಿಸದೆ ಸ್ವಲ್ಪ ಸರಿಯಾದ ಫಿಗರ್ಸ್ ಕೊಟ್ಟು, ನೀವು ಮಾಡಿದಂಥ ಕೆಲಸ ಏನು? ನಿಮ್ಮ ಕ್ವಾಂಟಿಟಿ ಆಫ್ ವರ್ಕ್ ಏನು, ಎಷ್ಟು ಹಣವನ್ನು ರಿಲೀಫ್‌ಗಾಗಿ ಕೊಟ್ಟಿರಿ ಅದನ್ನು ಹೇಳಿ?

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ವಿರೋಧಪಕ್ಷದ ನಾಯಕರು ಪುನರ್ವಸತಿ ಕೇಂದ್ರಗಳಲ್ಲಿ ಏನೇನು ಮಾಡಿದ್ದೀರಿ ಎಂದು ಕೇಳುತ್ತಿದ್ದಾರೆ. ಸ್ವಾಮಿ ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದೇವೆ. ಶಾಲೆಗಳನ್ನು ಕಟ್ಟಿದ್ದೇವೆ. ಸಾರ್ವಜನಿಕವಾಗಿ ಒಂದು ಹಳ್ಳಿಗೆ ಸರ್ಕಾರದಿಂದ ಕೊಡಬೇಕಾದಂಥ ಸೌಲಭ್ಯಗಳನ್ನೇನು ಕೊಡಬೇಕೊ ಅದು ಶಾಲೆ ಆಗಿರಬಹುದು, ಪೂಜಾ ಮಂದಿರ ಆಗಿರಬಹುದು, ಕುಡಿಯುವ ನೀರಾಗಿರಬಹುದು, ಆಸ್ಪತ್ರೆಯಾಗಿರಬಹುದು ಅಂತಹವುಗಳನ್ನೆಲ್ಲವನ್ನು ಕೂಡ ಕೊಟ್ಟಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನಗೆ ಫ್ಯಾಕ್ಸ್ ಬಂದಿದೆ, 10X10 ಅಳತೆಯ ಫೆಡ್ಸ್‌ನಲ್ಲಿ ಜನರಿಗೆ ಶಿಫ್ಟ್ ಮಾಡಿದ್ದಾರೆ.

ಶ್ರೀ ರಮೇಶ್ ಸಿ.ಜಿಗಜಿಣಗಿ : ಅದು ಈಗ ಮಾಡಿರುವಂಥದ್ದು. ಜಮೀನು ಮುಳುಗಡೆಯಾಗಿರತಕ್ಕಂಥವರಿಗೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಲ್ಲಿರುವವರು ಪುನರ್ವಸತಿ ಕಾರ್ಯಕ್ರಮದಡಿಯಲ್ಲಿರುವವರು.

ಶ್ರೀ ರಮೇಶ್ ಸಿ. ಜಿಗಜಿಣಗಿ : ಅಧ್ಯಕ್ಷರೆ, ಈಗ ಅವರಿಗೆ ಫ್ಯಾಕ್ಸ್ ಬಂದಿರತಕ್ಕಂಥದ್ದು ಏನು ಇದು ಅದು ಕಂಟಿನ್‌ಜೆನ್ಸಿ ಫಂಡ್‌ನಲ್ಲಿ ಕಟ್ಟಿರತಕ್ಕಂಥದ್ದು. ದಯಮಾಡಿ ತಾವೂ ಆ ರೀತಿ ಮಾತನಾಡುವುದು ಬೇಡ. ಸ್ವಾಮಿ ಅವರಿಗೇ ಗೊತ್ತಿದೆ. ಬರೀ ನಿಮ್ಮದೆ ಪುನರ್ವಸತಿ ಕೇಂದ್ರಗಳಲ್ಲಿ ಕಟ್ಟಿರತಕ್ಕಂಥ ಬಿಲ್ಡಿಂಗ್‌ಗಳ ರಿಪೇರಿಗಾಗಿ ನಾವು 16 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಆ ಬಗ್ಗೆ ನಾನು ಹೇಳಬಯಸುವುದಿಲ್ಲ. ಅದಕ್ಕೆ ತಾವು ದಯವಿಟ್ಟು ಆ ರೀತಿ ಮಾತನಾಡುವುದು ಬೇಡ ನಾಯಕರೆ, 5-6 ವರ್ಷಗಳ ಹಿಂದೆ ಪುನರ್ವಸತಿ ಕೇಂದ್ರಗಳಲ್ಲಿ ಸರ್ಕಾರಿ ಬಿಲ್ಡಿಂಗ್‌ಗಳನ್ನೇನು ಕಾಂಟ್ರಾಕ್ಟ್ ಕೊಟ್ಟು ಕಟ್ಟಿದ್ದರು ಅಲ್ಲಿ ಒಳಗೆ ಯಾರೂ ಹೋಗಿಲ್ಲ. ಅಲ್ಲಿನ ಪೂಜಾ ಮಂದಿರದಲ್ಲಿ ಯಾರೂ ಪೂಜೆ ಮಾಡಿಲ್ಲ ಬೇಕಾದರೆ ಬೀಳಗಿ ತಾಲ್ಲೂಕಿನೆ ಶಾಸಕರನ್ನು ಕೇಳಿ. ಅವರು ನಾವು ಹೋಗಿ ನೋಡಿದೆವು ಪೂಜಾಮಂದಿರ ಕುಸಿದು ಬಿದ್ದಿದೆ. ಮತ್ತೆ ಮಸೀದಿ ಏನು ಕೊಟ್ಟಿದ್ದಾರೆ ಅದೂ ಸಹ ಕುಸಿದು ಬಿದ್ದಿದೆ. ಒಬ್ಬರೂ ಸಹ ಪೂಜೆ ಮಾಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ಯಾರು ಕಟ್ಟಿದ್ದಾನೋ ಅವನನ್ನು ಜೈಲಿಗೆ ಹಾಕಿ. ನಿಮ್ಮ ಜಮ್ಮಾದಾರ್‌ರವರೆ ಕಳಪೆ ಕಾಮಗಾರಿ ನಡೆದಿದೆ ಎಂದು ಹೇಳುತ್ತಿದ್ದಾರೆ. ಮತ್ತು ಅವರನ್ನು ಸಸ್ಪೆಂಡ್ ಮಾಡಿ ಎಂದು ಹೇಳಿದರೆ ನಿಮಗೆ ತಾಕತ್ತಿಲ್ಲ. ಅವರು ಹೇಳಿದರು ಎಕ್ಸೆಪ್ಟ್ ಫ್ಯೂ ಆಫೀಸರ್ಸ್ ಟ್ರಾನ್ಸ್‌ಫರ್ ಮಾಡುವುದು ಬಿಟ್ಟರೆ Government has not taken any action on my recommendation, ಅಂತ openly he has given this statement. You have no guts to take action. ನೀವು ಮಾಡಿದಿರಿ, ಅವರು ಮಾಡಿದರು. ನಾವು ಮಾಡಿದ್ದರೂ ಜೈಲಿಗೆ ಹಾಕಿ.

ಅಧ್ಯಕ್ಷರು : ಗಟ್ಸ್ ಎಲ್ಲರಿಗೂ ಇರುತ್ತದೆ. when it comes to the question of taking action against the culprit it becomes soft. Always guts become very soft when it comes to the question of taking action.

ಶ್ರೀಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಬೇರೆಯವರಿಗೆ ಛಾಲೆಂಜ್ ಮಾಡುವಾಗ ಅದನ್ನೂ ಸಹ ಮಾಡಬೇಕು.

ಅಧ್ಯಕ್ಷರು : ನಾನು ನಿಮ್ಮ ಮೇಲೆ ಹೇಳಲಿಲ್ಲ. ಈ ಕಡೆ ಪ್ರಕಾಶ್‌ರವರು ಕುಳಿತಿದ್ದಾರೆ, ಈ ರಾಜಕೀಯ ವ್ಯವಸ್ಥೆಯೊಳಗೆ ಯಾರು ತಪ್ಪು ಮಾಡಿದರು, ದುರುಪಯೋಗ ಮಾಡಿದವರ ಮೇಲೆ ನೇರವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ನಮಗೆಲ್ಲ ಹ್ಯಾಂಡ್ಸ್ ಸಾಲುವುದಿಲ್ಲ. ಅಂದರೆ are they sufficiently strong? ಏನೇನೋ ನಿರ್ಬಂಧಗಳು, ಸಂಬಂಧ, ಜಾತಿ, ಓಟು, ರಾಜಕೀಯ,

ಪಕ್ಷ, ಪಂಗಡ, ಕುಲ, ಮತ ಎಷ್ಟು ನಿರ್ಬಂಧಗಳಿದ್ದಾವೆ. ಹೋಗುವುದಕ್ಕೆ ಆಗುವುದೇ ಇಲ್ಲ. ಮಾತನಾಡುವುದು ಸುಲಭ ಆದರೆ ಆಗುವುದೇ ಇಲ್ಲ. ಈ ಗಂಗಾರಾಮ್ ಕಟ್ಟಡಕ್ಕೆ ಲೈಸನ್ಸ್ ಕೋಟ್ಟುಹೋದ ಪುಣಾತ್ಮ, ನೂರಾರು ಜನ ಸತ್ತುಹೋದರು, ಯಾರು ಹೋದರು ಜೈಲಿಗೆ? ಯಾರೂ ಹೋಗಲಿಲ್ಲ. ಸತ್ತವರ ಮನೆಯವರು ಸತ್ತುಹೋದರು ಅಷ್ಟೆ. ಯಾರೂ ಜೈಲಿಗೆ ಹೋಗುವುದಿಲ್ಲ. ಮೊಯಿಲಿಯವರೆ ತಾವು ಮುಖ್ಯಮಂತ್ರಿಯಾಗಿದ್ದಿರಿ ಎಷ್ಟು ಜನರನ್ನು ಜೈಲಿಗೆ ಕಳುಹಿಸುವುದಕ್ಕಾಗಿತ್ತು? ಆಗುವುದಿಲ್ಲ. ನಿರ್ಬಂಧಗಳು, ಮುಲಾಜುಗಳು, ಹಂಗುಗಳ ಮಧ್ಯೆಯೆ ಬದುಕಿರತಕ್ಕಂಥ ಹುಳುಗಳು ನಾವು.

ಶ್ರೀ ಕೆ.ಎನ್. ನಾಗೇಗೌಡ : ಅಧ್ಯಕ್ಷರೆ, ಬಾಗಲಕೋಟೆಯಲ್ಲಿ 47 ಇಂಜಿನಿಯರ್ಸ್ ಪೋಸ್ಟ್ ಖಾಲಿ ಇತ್ತು. ಅಲ್ಲಿಗೆ ಹೋಗದೆ ಇದ್ದಂಥ 29 ಸಸ್ಪೆಂಡ್ ಮಾಡಿದ್ದೇನೆ. ಇಲ್ಲಿಯವರೆಗೆ ಎಂಜಿನಿಯರ್ಸ್‌ಗಳು ಹೋಗುತ್ತಾ ಇರಲಿಲ್ಲ, ರೆವಿನ್ಯೂ ಆಫೀಸರ್ಸ್ ಹೋಗುತ್ತಾ ಇರಲಿಲ್ಲ, ಆರ್ ಅಂಡ್ ಆರ್ ಇಂಜಿನಿಯರ್ಸ್‌ಗಳನ್ನು ಸಸ್ಪೆಂಡ್ ಮಾಡಿದ್ದೇವೆ. ಯಾರು ಟ್ರಾನ್ಸ್‌ಫರ್ ಆದ ತಕ್ಷಣ ಆಲಮಟ್ಟಿಗೆ ಹೋಗುವುದಿಲ್ಲ ಅವರನ್ನು ಸಸ್ಪೆಂಡ್ ಮಾಡಿ ನಂತರ ಡ್ಯೂಟಿಗೆ ಕಳುಹಿಸಿಕೊಟ್ಟಿದ್ದೇವೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ನಮ್ಮ ಜಾಮ್‌ದಾರ್‌ರವರು ತಪ್ಪು ಮಾಡಿದಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಬರೆದು ಕಳುಹಿಸಿದ್ದರೂ ಇನ್ನೂ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. ನಾನು ತಕ್ಷಣ ಈ ದಿವಸವೇ ನಮ್ಮ ಹಿರಿಯ ಅಧಿಕಾರಿಗಳನ್ನು ಸಂಪರ್ಕಿಸಿ ಜಾಮ್‌ದಾರ್‌ರವರು ಯಾರ್ಯಾರು ಅಧಿಕಾರಿಗಳ ಬಗ್ಗೆ ಕಳುಹಿಸಿದ್ದಾರೆ, ಅವರು ಹಿರಿಯ ಅಧಿಕಾರಿಯೇ ಆಗಿರಲಿ, ಕಿರಿಯ ಅಧಿಕಾರಿಯೇ ಆಗಿರಲಿ, ಅವರು ತಪ್ಪು ಮಾಡಿದ್ದರೆ ತಕ್ಷಣವೇ ಅವರನ್ನು ಅಮಾನತ್ತಿನಲ್ಲಿಡಲಿಕ್ಕೆ ನಾವು ಯಾವ ರೀತಿಯಿಂದಲೂ ಹಿಂದೆ-ಮುಂದೆ ನೋಡುವುದಿಲ್ಲ ಎಂಬುದನ್ನು ಮಾನ್ಯ ಖರ್ಗೆಯವರ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ ಒಂದು ಹೊಸ ಸಿಸ್ಟಂ ಸೃಷ್ಟಿ ಮಾಡಬೇಕಾದರೆ ಸ್ವಲ್ಪ ಹೆಚ್ಚು ಕಡಿಮೆಯಾಗುತ್ತವೆ. ನಾವು ಎಲ್ಲವನ್ನೂ ಮಾಡಿದ್ದೇವೆ ಎಂದು ಹೇಳುವುದಿಲ್ಲ. ಇನ್ನೂ ಕೆಲವು ಪುನರ್ವಸತಿ ಕೇಂದ್ರಗಳಿಗೆ ಸರಿಯಾದ ನೀರಿನ ವ್ಯವಸ್ಥೆ ಇರುವುದಿಲ್ಲ, ಅದನ್ನು ನಾವು ಮಾಡುತ್ತೇವೆ, ಕೆಲವು ಪುನರ್ವಸತಿ ಕೇಂದ್ರಗಳಿಗೆ ರಸ್ತೆ ಸರಿಯಾಗಿ ಆಗಿರುವುದಿಲ್ಲ ಅಂತಹ ರಸ್ತೆಗಳನ್ನು ಸಹ ನಾವು ಸರಿಯಾಗಿ ಮಾಡಲಿಕ್ಕೆ ತಯಾರಿದ್ದೇವೆ ಎಂದು ಹೇಳಿ ಮಾನ್ಯ ಸದಸ್ಯರುಗಳು ಇಂತಿಥ ಕೇಂದ್ರಗಳಲ್ಲಿ ಸರಿಯಾಗಿ ಕೆಲಸ ಆಗಿಲ್ಲ ಎಂದು ಪರ್ಟಿಕ್ಯುಲರ್ ಆಗಿ ನನ್ನ ಗಮನಕ್ಕೂ ಕೂಡ ತಂದರೆ ನಾನು ತಕ್ಷಣ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ನಾನು ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಜಗದೀಶ್ ತಿಮ್ಮನಗೌಡ ಪಾಟೀಲ್ (ಬೀಳಗಿ) : ಅಧ್ಯಕ್ಷರೆ, ನಾನು ಒಂದು ಮುಖ್ಯವಾದ ಪ್ರಶ್ನೆಯನ್ನು ಕೇಳಿದ್ದೆ. ಏಕೆಂದರೆ, ಪುನರ್ವಸತಿ ಕೇಂದ್ರಗಳಿಗೆ ಸಂತ್ರಸ್ಥರು ಸ್ಥಳಾಂತರಗೊಂಡ ನಂತರ ಅವರ ಹೊಟ್ಟೆ, ಉಪಚಾರಕ್ಕಾಗಿ ಏನು ವ್ಯವಸ್ಥೆ ಮಾಡುತ್ತೀರಿ ಏನ್ನುವ ಮುಖ್ಯವಾದ ಪ್ರಶ್ನೆಯನ್ನು

ಕೇಳಿದ್ದೆ ಅದಕ್ಕೆ ನೀವು ಉತ್ತರವನ್ನು ಹೇಳಲಿಲ್ಲ. ದಯಮಾಡಿ ಅದಕ್ಕೆ ಉತ್ತರವನ್ನು ಹೇಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ನಾನು ಕೂಡ ಹೇಳಿದೆ, ಅಲ್ಲಿ ಪುನರ್ವಸತಿ ಕೇಂದ್ರಗಳು ಏನಿದ್ದಾವೆ, ಅಲ್ಲಿ ನೀರಾವರಿ ಪ್ರದೇಶ ಏನು ಇಲ್ಲ. ಎಲ್ಲಾ ಖುಷ್ಕಿ ಜಮೀನಿನಲ್ಲಿ ಮಾಡಿರತಕ್ಕಂಥದ್ದು. ಅದು ನಮಗೂ ಕೂಡ ಭಯ ಎನಿಸುತ್ತದೆ. ಇನ್ನು ಇಪ್ಪತ್ತು ವರ್ಷಗಳು ಆದಮೇಲೆ ಈ ಜನಗಳ ಭವಿಷ್ಯ ಏನು ಎಂದು ನಮಗೂ ಎನಿಸುತ್ತದೆ. ಅದಕ್ಕೆ ನಾವು ವರ್ಲ್ಡ್ ಬ್ಯಾಂಕ್ ನವರ ಜೊತೆ ಸಂಪರ್ಕ ಮಾಡಿದ್ದೇವೆ. ಪುನರ್ವಸತಿ ಕೇಂದ್ರಗಳಲ್ಲಿ ಗುಡಿ ಕೈಗಾರಿಕೆ ಆಗಿರಬಹುದು, ಅಥವಾ ಎಲ್ಲೆಲ್ಲಿ ದೊಡ್ಡ ದೊಡ್ಡ ಕೇಂದ್ರಗಳಿವೆ ಅಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ವಿಚಾರ ಆಗಿರಬಹುದು ಅವರಿಗೆ ಏನಾದರೂ ವ್ಯವಸ್ಥೆ ಮಾಡಬೇಕೆನ್ನುವ ಚಿಂತನೆಯಲ್ಲಿ ಸರ್ಕಾರ ಇದೆ.

+ ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) : ನಿಯಮ 69ರ ಅಡಿಯಲ್ಲಿ ವಿರೋಧ ಪಕ್ಷದ ನಾಯಕರು ಮತ್ತು ಬಿ.ಜೆ.ಪಿ ನಾಯಕರಾದ ಯಡಿಯೂರಪ್ಪನವರು ಹಾಗೂ ರಾಜಶೇಖರ ಶೀಲವಂತರವರು, ಬಸವನಗೌಡರು, ಜಿ.ಟಿ. ಪಾಟೀಲರು ಎಲ್ಲರೂ ಸಹ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಪುನರ್ವಸತಿಗೆ ಸಂಬಂಧಪಟ್ಟಂತೆ ನಮ್ಮ ಕಂದಾಯ ಸಚಿವರು ಈಗಾಗಲೇ ಎಲ್ಲ ಉತ್ತರವನ್ನು ಕೊಟ್ಟಿದ್ದಾರೆ. ಇನ್ನು ಇರತಕ್ಕಂಥ ಪ್ರೋಗ್ರೆಸ್ ಬಗ್ಗೆ ಮತ್ತು ಯಾವರೀತಿಯಲ್ಲಿ ಕೆಲಸ ನಡೆದಿದೆ ಎಂಬ ಬಗ್ಗೆ ಕೆಲವು ಮಾಹಿತಿಗಳನ್ನು ಮಾನ್ಯ ಸದಸ್ಯರಿಗೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಪೂಜೆಯಾದದ್ದು 1967ರಲ್ಲಿ ಮಾನ್ಯ ಅಧ್ಯಕ್ಷರೆ 1967-68 ರಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಕಾರ್ಯ ಪ್ರಾರಂಭವಾದದ್ದು, 1967-68ರಿಂದ ಇಲ್ಲಿಯವರೆಗೆ ವೆಚ್ಚವಾಗಿರತಕ್ಕಂಥ ಹಣ 2,558 ಕೋಟಿ ರೂಪಾಯಿಗಳು ಜೂನ್ ಅಂತ್ಯದವರೆಗೆ. ಅದರಲ್ಲಿ ಮಾನ್ಯ ಖರ್ಗೆಯವರು ಪ್ರಸ್ತಾಪ ಮಾಡುತ್ತಾ ನೀವು ಬಂದಾಗ ಎಷ್ಟು ಮಾಡಿದಿರಿ, ನಾವು ಬಂದಾಗ ಎಷ್ಟು ಮಾಡಿದೆವು ಎಂದು ಕೇಳಿದರು. ನಾನು ಅಂಕಿಅಂಶಗಳನ್ನು ಹೇಳುವುದಕ್ಕೆ ಹೋದರೆ ಪ್ರೋಗ್ರೆಸ್ ಕೇಳುತ್ತಾರೆ. ಪ್ರೋಗ್ರೆಸ್ ಸಹ ನೋಡೋಣ. naturally progress allied with the figures, ಅಮೌಂಟ್ ಎಷ್ಟು ಇರುತ್ತದೆ ಅದಕ್ಕೆ ಡೀಟೈಲ್ ಇರುತ್ತದೆ. ಇದರಲ್ಲಿ ಸುಮಾರು 1,200 ಕೋಟಿ ರೂಪಾಯಿಗಳನ್ನು ಎರಡು ವರ್ಷದಲ್ಲಿ ಅಂದರೆ ಹೋದ ವರ್ಷ 1995-96ರಲ್ಲಿ 388 ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿದ್ದೇವೆ. 1996-97ರಲ್ಲಿ 714 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. 1997-98ರಲ್ಲಿ ಜೂನ್ ಅಂತ್ಯದವರೆಗೆ 109 ಕೋಟಿ ರೂಪಾಯಿಯಷ್ಟು ಹಣವನ್ನು ಖರ್ಚು ಮಾಡಿದ್ದೇವೆ. ಅಂದರೆ 1,200 ಕೋಟಿ ರೂಪಾಯಿಗಳು ನಾನು ಹೇಳಿದಂಥ ಫಿಗರ್ಸ್. ಈ ಮೂರು ವರ್ಷಗಳಲ್ಲಿ ಅವರು ಎಷ್ಟು ಹಣವನ್ನು ಖರ್ಚು ಮಾಡಿದ್ದಾರೋ ಅದಕ್ಕಿಂತ ಹೆಚ್ಚಿನ ಹಣವನ್ನು ಖರ್ಚು ಮಾಡಿದ್ದೇವೆ. ಮಾನ್ಯ ಯಡಿಯೂರಪ್ಪನವರು ಪ್ಲಾನ್ ಆಫ್ ಆ್ಯಕ್ಷನ್ ಏನು ಮಾಡಿದ್ದೀರಿ ಎಂದು ಕೇಳಿದರು. ನಾವು ಇಲ್ಲಿಯವರೆಗೆ ಖರ್ಚು

ಮಾಡಿರುವಂತಹ ಹಣದಲ್ಲಿ ನಮ್ಮ ಮಾರ್ಕೆಟಿಂಗ್ ಬಾರೋಯಿಂಗ್ಸ್ ಅನ್ನು ಹೇಳಿದರೆ ಅನುಕೂಲವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. Raised so far in market/borrowings, 1995-96ರಲ್ಲಿ 180 ಕೋಟಿ ರೂಪಾಯಿಗಳು, 1996-97ರಲ್ಲಿ 509 ಕೋಟಿ ರೂಪಾಯಿಗಳು, 1997-98ರಲ್ಲಿ 400 ಕೋಟಿ ರೂಪಾಯಿಗಳು, ಇಲ್ಲಿಯವರೆಗೆ ಈ ಕೃಷ್ಣ ಭಾಗ್ಯ ಜಲ ನಿಗಮದ ಮಾರ್ಕೆಟಿಂಗ್ ಬಾರೋಯಿಂಗ್ಸ್‌ನಲ್ಲಿ 1089ಕೋಟಿ ರೂಪಾಯಿಗಳನ್ನು ನಾವು ತೆಗೆದುಕೊಂಡಿದ್ದೇವೆ. ನಮ್ಮ ಪ್ರಪೋಸ್ ಫಾರ್ ಬಾರೋಯಿಂಗ್ಸ್‌ನಲ್ಲಿ ಈ 2000 ಇಸವಿಯಲ್ಲಿ ಪ್ರಾಜೆಕ್ಟ್‌ನ 173 ಟಿ.ಎಂ.ಸಿ. ನೀರನ್ನು ಉಪಯೋಗಿಸುವುದಕ್ಕೆ ಆಲಮಟ್ಟಿ ಮತ್ತು ಯು.ಕೆ.ಪಿ ಗಳಲ್ಲಿ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರೆಂದು ಮಾನ್ಯ ಯಡಿಯೂರಪ್ಪನವರು ಕೇಳಿದ್ದಾರೆ. ಅದಕ್ಕೆ 1997-98ರಲ್ಲಿ 350 ಕೋಟಿ ರೂಪಾಯಿಗಳು, ಈ ಸಾರಿ 400 ಕೋಟಿ ರೂಪಾಯಿಗಳನ್ನು ಮಾಡಿದ್ದೇವೆ ಮತ್ತೆ 1997-98ಕ್ಕೆ 350 ಕೋಟಿ ರೂಪಾಯಿಗಳನ್ನು ಮಾಡುತ್ತೇವೆ. 1998-99ಕ್ಕೆ 750 ಕೋಟಿ ರೂಪಾಯಿಗಳನ್ನು ಬಾರೋಯಿಂಗ್ ಮಾಡಬೇಕೆಂದು ಆಲೋಚನೆ ಮಾಡಿದ್ದೇವೆ. 1999ಕ್ಕೆ 890 ಕೋಟಿ ರೂಪಾಯಿಗಳನ್ನು ಮಾಡಬೇಕೆಂದು ಆಲೋಚನೆ ಮಾಡಿದ್ದೇವೆ. ಈಗ ನಮಗೆ ಬೇಕಾಗಿರತಕ್ಕಂಥ ಹಣ ಇನ್ನು ಉಳಿದಿರುವಂತಹ ಪ್ರಾಜೆಕ್ಟ್‌ಗಳಿಗೆ ಬ್ಯಾಲೆನ್ಸ್, ಕ್ರಾಸ್ ಬ್ಯಾಲೆನ್ಸ್‌ಗೆ ಸುಮಾರು 4,624 ಕೋಟಿ ರೂಪಾಯಿಗಳ ಹಣ ಬೇಕು. ಅದರ ಲ್ಯಾಂಡ್‌ಗೆ 734 ಕೋಟಿ ರೂಪಾಯಿಗಳು ಬೇಕು, ಆರ ಅಂಡ ಆರವರ್ಕಗೆ 672 ಕೋಟಿ ರೂಪಾಯಿಗಳು ಬೇಕು, ಡ್ಯಾಮ್ ಕನ್ಸ್‌ಟ್ರಕ್ಷನ್ಸ್‌ಗೆ ಒಟ್ಟು ಇನ್ನು ಬ್ಯಾಲೆನ್ಸ್ ವಿಂಗ್ 1,041ಕೋಟಿ ರೂಪಾಯಿಗಳು ಬೇಕು, ಕೆನಾಲ್ ವರ್ಕ್‌ಗೆ 1,73 ಕೋಟಿ ರೂಪಾಯಿಗಳು ಬೇಕು. ಈ ರೀತಿ ವಿವರಗಳು ಇದೆ. ಇವೆಲ್ಲವನ್ನು ನಾವು ಯೋಚನೆ ಮಾಡಿ ಪ್ಲಾನ್ ಆಫ್ ಆಕ್ಷನ್ ಮಾಡಿ ಕೃಷ್ಣಾ ಭಾಗ್ಯ ಜಲ ನಿಗಮದ ಬಗ್ಗೆ ಚೀಫ್ ಮಿನಿಸ್ಟರ್‌ರವರ ಅಧ್ಯಕ್ಷತೆಯಲ್ಲಿ, ನಾನು ಉಪಾಧ್ಯಕ್ಷನಾಗಿ ನಾವೆಲ್ಲರೂ ಆಲೋಚನೆ ಮಾಡಿ ಇನ್ನು ಬಾಕಿ ಉಳಿದಿರುವಂತಹ ಕಾಮಗಾರಿಗಳನ್ನು 2,000 ಇಸವಿಯಲ್ಲಿ ಮುಗಿಸುವುದಕ್ಕೆ ಎಷ್ಟು ಬಾರೋಯಿಂಗ್ಸ್ ಮಾಡಬೇಕು ಮತ್ತು ಎಷ್ಟು ಸ್ಟೇಟ್ ಬಜೆಟರಿ ಸಪೋರ್ಟ್ ಮಾಡಬೇಕೆನ್ನುವಂಥಾದ್ದನ್ನು ಪ್ಲಾನ್ ಮಾಡಿ, ಕೆನಾಲ್‌ಗೆ, ಡ್ಯಾಮ್‌ಗೆ, ಆರ್ ಅಂಡ್ ಆರ್‌ಗೆ, ಪುನರ್ ವಸತಿಗೆ ಎಷ್ಟು ಬೇಕಾಗುತ್ತದೆನ್ನುವಂಥದ್ದನ್ನು ಪ್ಲಾನ್ ಆಫ್ ಆ್ಯಕ್ಷನ್ ಮಾಡಿದ್ದೇವೆ. ಈ ಎಲ್ಲಾ ವಿವರಗಳು ಎಂ.ಪಿ.ಗಳಿಗೆ ಕಳುಹಿಸಿದ್ದೇವೆ. ಅಲ್ಲಿ ಪಾರ್ಲಿಮೆಂಟ್ ನಡೆಯುತ್ತಿರುವುದರಿಂದ ಈ ಎಲ್ಲಾ ಡೀಟೈಲ್‌ಗಳನ್ನು ಅವರ ಹತ್ತಿರವಿರಲಿ ಎಂದು ಕಳುಹಿಸಿ ಕೊಟ್ಟಿದ್ದೇವೆ. ನಮ್ಮ ಎಲ್ಲಾ ಮೇಲ್ಮನೆಯ ಮತ್ತು ಈ ಮನೆಯ ಸದಸ್ಯರುಗಳಿಗೂ ಇವತ್ತೋ ನಾಳೆಯೋ ಈ ಡೀಟೈಲ್‌ಗಳನ್ನು ಕಳುಹಿಸಿ ಕೊಡುತ್ತೇನೆ.ಇನ್ನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈ ವರ್ಷ ಬಹಳ ಕಡಿಮೆ ಮಾಡಿದ್ದೀರೆನ್ನುವಂತಹ ಮಾತನ್ನು ಹೇಳಿದ್ದಾರೆ. ಈ ವರ್ಷ ನಾವು ಸಾವಿರದ ಇನ್ನೂರ ನಲವತ್ತೊಂಭತ್ತು ಕೋಟಿ, ಹದಿಮೂರು ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡಬೇಕೆಂದು ಬಜೆಟ್ ಪ್ರಾವಿಜನ್ ಮಾಡಿದ್ದೆವು. ಆ 1,249 ಕೋಟಿ ರೂಪಾಯಿಗಳ ವಿವರಗಳು ಹೇಗಿದೆ ಎಂದರೆ, ಇದರಲ್ಲಿ 472ಕೋಟಿ ರೂಪಾಯಿಗಳು ಆರ್ ಅಂಡ್ ಆರ್ ಗೆ, ಈ 1,249 ಕೋಟಿ ರೂಪಾಯಿಗಳು ಎಂದು ಏನು ಹೇಳಿದ್ದೇವೆ. ಅದರಲ್ಲಿ

600 ಕೋಟಿ ರೂಪಾಯಿಗಳನ್ನು ಪುನರ್ ವಸತಿಗಾಗಿ ಖರ್ಚು ಮಾಡುತ್ತಿದ್ದೇವೆ, ಇದರಲ್ಲಿ ಆರ್ ಅಂಡ್ ಆರ್ ವರ್ಕ್‌ಗೆ 472 ಕೋಟಿ ರೂಪಾಯಿಗಳು, ಕೆನಾಲ್ ಜೋನ್ ಒನ್ ಅಂಡ್ ಟೂ ಎರಡಕ್ಕೂ 400 ಕೋಟಿ ರೂಪಾಯಿಗಳನ್ನು ನಾಲೆಗಳಿಗೆ ಖರ್ಚು ಮಾಡಬೇಕೆಂದು ಇದ್ದೇವೆ. ಇನ್ನು ಡ್ಯಾಮ್ ಜೋನ್‌ಗೆ 80 ಕೋಟಿ ರೂಪಾಯಿಗಳನ್ನು ಈ ವರ್ಷ ಖರ್ಚು ಮಾಡಬೇಕೆಂದು ಇದ್ದೇವೆ. ಒ ಅಂಡ್ ಎಂಗೆ 58 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಆದರೆ ಅಷ್ಟು ಹಣವನ್ನು ಖರ್ಚು ಮಾಡಬಾರದೆಂದು ನಮ್ಮ ಉದ್ದೇಶವಿದೆ. ಅಷ್ಟು ಖರ್ಚು ಮಾಡುವುದಕ್ಕೆ ಬಿಡುವುದಿಲ್ಲ. ನಾನು ಉತ್ತರವನ್ನು ಕೊಡುವಾಗ ಪ್ರಾರಂಭದಲ್ಲಿ ಬಾಗಲಕೋಟೆ ಬಗ್ಗೆ ಹೇಳಿದೆ. 100 ಕೋಟಿ ರೂಪಾಯಿಗಳನ್ನು ಈ ವರ್ಷ ಖರ್ಚು ಮಾಡಬೇಕೆಂದು ಹೇಳಿದ್ದೇನೆ. ಇದರಲ್ಲಿ ಇಂಟ್ರೆಸ್ಟ್ ಕಾಂಪೋನೆಂಟ್ 150 ಕೋಟಿ ರೂಪಾಯಿಗಳು ಆಗುತ್ತದೆ, ಇತರೆ 89 ಕೋಟಿ ರೂಪಾಯಿಗಳಾಗುತ್ತವೆ. ಈ ವರ್ಷ ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ಗೆ 1,249 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಆಲೋಚನೆಯನ್ನು ಮಾಡಿಕೊಂಡಿದ್ದೇವೆ. ಇಲ್ಲಿಯವರೆಗೆ 109 ಕೋಟಿ ರೂಪಾಯಿಗಳು ಖರ್ಚು ಆಗಿದೆ. ಇದು ಏಕೆ ಕಡಿಮೆಯಾಯಿತೆನ್ನುವಂತಹ ಮಾತನ್ನು ಅವರು ಹೇಳಿದ್ದಾರೆ. ಇದರಲ್ಲಿ 3-4 ವಿಚಾರಗಳು ಬಹಳ ಪ್ರಾಮುಖ್ಯವಾದದ್ದು ಇವೆ. ಆರ್ ಅಂಡ ಆರ್ ವರ್ಕ್‌ನಲ್ಲಿ ಲ್ಯಾಂಡ್‌ಗೆ ನಾವು ಇವತ್ತು ಮೂರೂವರೆ ಲಕ್ಷ ಎಕರೆಯಲ್ಲಿ ಒಂದೂವರೆ ಲಕ್ಷ ಎಕರೆಗೆ ಪರಿಹಾರವನ್ನು ಕೊಟ್ಟಿಲ್ಲ. ಆ ವ್ಯಾಲ್ಯುಯೇಷನ್ ತಕರಾರೇ ಇವತ್ತು ಜಾಥ ಬಂದಿದ್ದು, ಈ ಲ್ಯಾಂಡ್ ಹೀಗಿರಬೇಕು, ಸೈಟ್ ಹೀಗಿರಬೇಕು, ಡಿಪ್ರಿಸಿಯೇಷನ್ ಕೊಡಬೇಕೆಂದು ಬಾಗಲಕೋಟೆಯಲ್ಲಿ ಸ್ಟೈಕ್ ಮಾಡಿಕೊಂಡು ಕುಳಿತಿದ್ದರು. ಬಾಗಲಕೋಟೆಗೆ 20-25 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಕೊಡಬೇಕಾಯಿತು. ಈ ಎಲ್ಲಾ 24 ಬೇಡಿಕೆಗಳು ಕಳೆದ ಅನೇಕ ವರ್ಷಗಳಿಂದ ಸರ್ಕಾರದ ಮುಂದೆ ಇತ್ತು. ಆ ಎಲ್ಲಾ ಬೇಡಿಕೆಗಳನ್ನು ಈಡೇರಿಸಲು ಕಾರಣಾಂತರದಿಂದ ಸಾಧ್ಯವಾಗದೇ ಇದ್ದುದರಿಂದ ಅದೆಲ್ಲವನ್ನು ಆಲೋಚನೆ ಮಾಡಿ ಈ 24 ಬೇಡಿಕೆಗಳನ್ನು ಈಡೇರಿಸಿದ್ದೇವೆ. ಈ ಕ್ಷೇತ್ರದ ಬಿ.ಜೆ.ಪಿ. ಮತ್ತು ಕಾಂಗ್ರೆಸ್ ಶಾಸಕರು ಇಲ್ಲಿದ್ದಾರೆ. ನಾವು ಒಂದಲ್ಲ, ಎರಡಲ್ಲ, ಅನೇಕ ಬಾರಿ ಈ ವಿಚಾರವಾಗಿ ಮೀಟಿಂಗ್ ಮಾಡಿದ್ದೇವೆ. ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಮತ್ತು ನಾವು, ಬಾಗಲಕೋಟೆಗೆ ಆಲಮಟ್ಟಿಗೆ ಹೋಗಿ ಮತ್ತೆ ಚೀಫ್ ಮಿನಿಸ್ಟರ್‌ರವರ ಜೊತೆಯಲ್ಲಿ, ಮಾನ್ಯ ವಿರೋಧಪಕ್ಷಗಳ ನಾಯಕರುಗಳನ್ನು ಕರೆದುಕೊಂಡು ಮೀಟಿಂಗ್ ಮಾಡಿ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿ 15-20 ದಿವಸಗಳು ಆಗಿವೆ. ಈಗ ಪೇಮೆಂಟ್ ಸ್ಟಾರ್ಟ್ ಆಗುತ್ತದೆ, ಇದು ಸ್ಟಾರ್ಟ್ ಆದಮೇಲೆ ನಮ್ಮ ಪ್ರೋಗ್ರಾಂ ಮೇಲೆ ಪ್ರೋಗ್ರೆಸ್ ಆಗುತ್ತದೆ. ಇವತ್ತಿನ ದಿವಸ ಶ್ರೀ ಜಾಮ್ದಾರ್ ರವರಿಗೆ ಎಲ್ಲಾ ರೀತಿಯ ಫ್ರೀಡಮ್ ಕೊಟ್ಟು ಏನು ಮಾಡಬೇಕೆಂದು ಗೈಡ್‌ಲೈನ್ಸ್ ಕೊಟ್ಟಿದ್ದೇವೆ. ಈಗ ಅವರು ಪರಿಹಾರವನ್ನು ಕೊಡುವಂತಹ ಕೆಲಸವನ್ನು ಪ್ರಾರಂಭ ಮಾಡುತ್ತಾರೆ. ಆ ಪರಿಹಾರ ಬಾಗಲಕೋಟೆ ಟೌನ್ ಆಗಲಿ, ಹಳ್ಳಿಗಳಿಗೆ ಇರಲಿ, ಅವೆಲ್ಲವನ್ನು ಸಹಿತ ನಾವು ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರಿಗೆ ಕೊಟ್ಟಿದ್ದೇವೆ. ಈ ರೀತಿಯಾಗಿ ಕೊಡುವುದಕ್ಕೆ ಈ 600 ಕೋಟಿ ರೂಪಾಯಿಗಳಲ್ಲಿ ಹೆಚ್ಚು ಹಣ ಖರ್ಚು ಆಗುತ್ತದೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ ಹೋದ

ವರ್ಷದಿಂದ ಕೆನಾಲ್ ವರ್ಕ್‌ಗೆ ಇಲ್ಲಿಯವರೆಗೆ 54 ಕೋಟಿ ರೂಪಾಯಿಗಳಾಗಿದ್ದು last year we have reached Rs. 700 crores. This year upto June it is Rs. 53.34 crores. Whatever progress which was achieved last year same progress we have achieved this year also. We have not changed it; only thing is, hereafterwards we have to speed up it. ಅದಕ್ಕೆ ಸ್ವಲ್ಪ ಸ್ಪೀಡ್ ಆಫ್ ಮಾಡಬೇಕಾಗಿದೆ. ಅದಕ್ಕೆ ಕಾರಣ ನಾವು ಮೀಟಿಂಗ್‌ನಲ್ಲಿ ಡಿಸ್‌ಕಸ್ ಮಾಡಿದ್ದೇವೆ. ನಮಗೆ ಹೆಚ್ಚು ಸಮಯವಿಲ್ಲ, ಅವೆಲ್ಲವನ್ನು ಡಿಸ್‌ಕಸ್ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಡ್ಯಾಮ್ ವರ್ಕ್ಸ್‌ಗೆ ಲಾಸ್ಟ್ ಇಯರ್ the amount spent there upto June only Rs. 6.7 crores. That is for the corresponding period last year. But, this year we have spent Rs. 13.71 crores. As far as O & M is concerned, last year we had spent Rs. 5.33 crores, but this year it is Rs. 6.79 crores ಅಂದರೆ ಪ್ರೋಗ್ರೆಸ್ ಏನು ಬಿದ್ದು ಹೋಯಿತೆಂದು ಹೇಳುತ್ತೀರಲ್ಲಾ, ಈಗ ದಯಮಾಡಿ 3-4 ತಿಂಗಳುಗಳು ಕಾಲಾವಕಾಶವನ್ನು ಕೊಡಿ ನಾವು ನಮ್ಮ ಪ್ರೋಗ್ರೆಸ್‌ಗಳನ್ನು ತೋರಿಸಿ ಕೊಡುತ್ತೇವೆ. ನಾವು ಇಲ್ಲಿ ಬೇಕಾದಷ್ಟು ಚರ್ಚೆ ಮಾಡಿದ್ದೇವೆ. ಈಗ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗದೆ ಈಗ ಹೋದ ವರ್ಷ ಏನು ಪ್ರೋಗ್ರೆಸ್ ಇತ್ತು ಕೆನಾಲ್ ಜೋನ್ ಮತ್ತು ಡ್ಯಾಮ್ ಜೋನ್ ಅವೆರಡು ಸೇಮ್ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಹೇಳಿದ್ದು, ನೀವು ಕೊಟ್ಟಂತಹ ಅಂಕಿಸಂಖ್ಯೆಗಳನ್ನೇ ತಾನೆ? ನೀವು ಎಕ್ಸ್‌ಪೆಂಡಿಚರ್ ಜುಲೈ ಎಂಡ್‌ವರೆಗೆ ಮಾಡಿದ್ದೀರಿ. Whatever you have given we have said.

SRI K.N. NAGEGOWDA : Exactly correct. You must know, there is no dispute about figures.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಅದನ್ನು ಪಾಲಿಸಿಲ್ಲವಲ್ಲ.

ಶ್ರೀ ಕೆ. ಎನ್. ನಾಗೇಗೌಡ : 109 ಕೋಟಿ ರೂಪಾಯಿಗಳನ್ನು ನಾವೇ ಕೊಟ್ಟಿದ್ದು, ಅದನ್ನೇ ನೀವು ಕೊಟ್ಟಿದ್ದು, ಅದರಲ್ಲಿ ಏನೂ ತಪ್ಪಿಲ್ಲ. ಕೆನಾಲ್ ವರ್ಕ್‌ನಲ್ಲಿ ಕಡಿಮೆ ಇದೆ ಎಂದು ನಾನು ಆವತ್ತೇ ಹೇಳಿದ್ದೇನೆ. ನಾನು ಎಂದೂ ಸಹಿತ ಬೇರೆ ಮಾತನ್ನು ಹೇಳಿಲ್ಲ. Comparing with the previous year figures, we see same figures here, but we have achieved the target. ಲಾಸ್ಟ್ ಇಯರ್ 700 ಚಿಲ್ಲರೆ ಮಾಡುತ್ತೇವೆಂದು ಹೇಳಿದ್ದೆವು. ಇದೇ ಫಿಗರ್ಸ್ ಇದ್ದು ಆಚೀವ್ ಮಾಡಿದ್ದೇವೆ. ಈ ವರ್ಷ ಪರಿಹಾರ ಕೊಡುವುದಕ್ಕೆ ಬಾಗಲಕೋಟೆಗೆ ಮತ್ತು ಹಳ್ಳಿಗಳಿಗೆ ಹೋದರೆ ಸೇಮ್ ಅಮೌಂಟ್ ಅಚೀವ್ ಮಾಡುತ್ತೇವೆ. ನಮಗೆ 1,200 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದರಲ್ಲಿ ಯಾವುದೇ ರೀತಿಯಾದಂತಹ ಬಾಧಕವಿಲ್ಲ. ಹಣದ ತೊಂದರೆಯೂ ಇಲ್ಲ. ನಾವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಅದೇ ಪ್ರಕಾರ ನಾವು ಮಾಡುತ್ತೇವೆಂದು

ಹೇಳಿದ್ದೇನೆ ವಿನಃ ಬೇರೆನೂ ಅಲ್ಲ. ಇನ್ನು ಆಲಮಟ್ಟಿ ಅಣೆಕಟ್ಟಿನ ಬಗ್ಗೆ ನಮ್ಮ ಸ್ನೇಹಿತರುಗಳು ಹೋಗಬೇಕು. ಅಲ್ಲಿ ಯಾವ ಪ್ರಮಾಣದಲ್ಲಿ ಕೆಲಸವಾಗಿದೆ ಎಂಬುದನ್ನು ಎಲ್ಲಾ ಸ್ನೇಹಿತರು ನೋಡಿಕೊಂಡು ಬರಬಹುದು. ಮಾನ್ಯ ಯಡಿಯೂರಪ್ಪನವರು, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಅಲ್ಲಿಗೆ ಹೋಗಿದ್ದಾರೆ. ಅವರು ಅಲ್ಲಿಗೆ ಹೋಗಿದ್ದಾಗ ತೃಪ್ತರಾಗಿದ್ದರು ಇಲ್ಲಿಗೆ ಬಂದಾಗ ತೃಪ್ತಿ ಕಡಿಮೆಯಾಗುತ್ತದೆ. ಅವರು ಅಬ್ಜೆಕ್ಷನ್ ಏನು ಮಾಡಿಲ್ಲ, ಅಲ್ಲಿ ಕೆಲಸ ತುಂಬಾ ಚೆನ್ನಾಗಿ ನಡೆದಿದೆ. ನಮ್ಮ ಪ್ರೋಗ್ರಾಂ ಏನು ಇತ್ತೋ, ಆ ಪ್ರೋಗ್ರಾಂ ಪ್ರಕಾರ ಮಾಡುತ್ತಾ ಬಂದಿದ್ದಾರೆ. ಇವತ್ತು ಗ್ಯಾಮನ್ ಇಂಡಿಯಾದವರು ಒಳ್ಳೆಯ ಕಂಪನಿಯವರು ಕೆಲಸ ಮಾಡುತ್ತಾ ಇದ್ದಾರೆ. ಇನ್ನು ಗೇಟ್‌ಗಳ ಬಗ್ಗೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡಿದರು; ಗೇಟ್‌ಗಳು ನಾವೇ ಮಾಡುವುದು, ಅದು ಎಲ್ಲಾ ರೆಡಿಯಾಗಿದೆ. Only hoisting has to be done with German collaboration ಮಾಡಿಕೊಳ್ಳಬೇಕಾಗಿತ್ತು. ಈ ವಿಷಯವಾಗಿ "ದೇಸಾಯಿ ಕಮಿಟಿ" ಯವರು ಜರ್ಮನ್‌ಗೆ ಹೋಗಿಬಂದಿದ್ದಾರೆ. ಇನ್ನು ಡ್ಯಾಮ್ ಪೊಜಿಷನ್ ಬಗ್ಗೆ ಏನಾಗಿದೆ ಎಂದರೆ Raising of spheres - starting on 1st April 1997ಕ್ಕೇ ಸ್ಟಾರ್ಟ್ ಆಗಿದೆ. completion by February 28, 1998ಕ್ಕೆ ಪ್ರೋಗ್ರಾಂ ಇದೆ. Spillway, bridege duckt,and slabs - completion by 1998 June 30th erection of gates - completion by 31st March 1999 ಜನವರಿ 1998 ರಿಂದ ಪ್ರಾರಂಭವಾಗಿ 31-3-1999ಕ್ಕೆ ಕಂಪ್ಲೀಟ್ ಆಗುತ್ತದೆ. There is no problem as far as raising of spheres, erection of gate, bridge, duckt, etc., and there will be full storage by monsoon 1999. This is our vision. ಇದಕ್ಕೆ ಯಾವ ತೊಂದರೆಯೂ ಇಲ್ಲ. ನಮ್ಮ ಪ್ರೋಗ್ರಾಂ ಪ್ರಕಾರ ಹೋಗುತ್ತೇವೆ. ಇನ್ನು ನಾರಾಯಣಪುರದ ರೈಟ್‌ಬ್ಯಾಂಕ್ ಕೆನಾಲ್ ಬಗ್ಗೆ ಹೇಳಿದರು. ಇದು ಮೈನ್ ಕೆನಾಲ್ 95 ಕಿ.ಮೀ ಇದೆ. ನಾವು ಇಲ್ಲಿಯವರೆಗೆ 70ಕಿ.ಮೀ. ಮಾಡಿದ್ದೇವೆ. ಈಗ ಇದು ವೇರಿಯಸ್ ಸ್ಟೇಜ್‌ನಲ್ಲಿದ್ದು ಪ್ರೋಗ್ರೆಸ್‌ನಲ್ಲಿದೆ. ಇನ್ನು ಸರ್ವೆ 25 ಕಿ.ಮೀ. ಆಗಬೇಕು, 84ಸಾವಿರ ಹೆಕ್ಟೇರ್ ಭೂಮಿಗೆ ನೀರು ಕೊಡುತ್ತಿದ್ದೇವೆ. ಇನ್ನು 70 ಕಿ.ಮೀ.ಗೆ ಇನ್ ಆಲ್ ಸ್ಟೇಜ್‌ನಲ್ಲಿ ಸಿ.ಡಿ. ವರ್ಕ್ಸ್ ಆಗಿಲ್ಲ. ಈ ಸಿ.ಡಿ. ವರ್ಕ್ಸ್ ಆಗದೇ ನಮಗೆ ಬಹಳ ತೊಂದರೆಯಾಗಿರುವಂಥಾದ್ದು. ಒಟ್ಟು ಸಿ.ಡಿ ವರ್ಕ್ಸ್, ಕ್ರಾಸ್ ಬ್ಯಾರೇಜ್ ವರ್ಕ್ಸ್ ಸುಮಾರು 130 ಇದೆ. ಈ 130 ರಲ್ಲಿ 77 ಸಿ.ಡಿ. ವರ್ಕ್ಸ್‌ಗಳು ಈಗಾಗಲೇ ಪ್ರೋಗ್ರೆಸ್‌ನಲ್ಲಿವೆ, 31 ಸಿ.ಡಿ. ವರ್ಕ್ಸ್‌ಗಳನ್ನು ಕಂಪ್ಲೀಟ್ ಮಾಡಿದ್ದೇವೆ. ಇನ್ನು ಟ್ಯಾಕಲ್ ಮಾಡುವಂಥಾದ್ದು, 22.ಸಿ.ಡಿ. ವರ್ಕ್ಸ್‌ಗಳು ನಾರಾಯಣಪುರದಲ್ಲಿ ಇದೆ. ಇನ್ನು ಜೇವರ್ಗಿ ಬ್ರಾಂಚ್ ಬಗ್ಗೆ ಮಾತನಾಡಿದ್ದಾರೆ. 37ಅನ್ನು ಕಂಪ್ಲೀಟ್ ಮಾಡಿದ್ದೇವೆ. ಇನ್ನು ಉಳಿದಿರತಕ್ಕಂಥ 22ನ್ನು ಟ್ಯಾಕಲ್ ಮಾಡುತ್ತಿದ್ದೇವೆ. ಇನ್ನು ಇಂಡಿ ಬ್ರಾಂಚ್ ಬಗ್ಗೆ ಕೇಳಿದರು. ಇಂಡಿ ಬ್ರ್ಯಾಂಚ್‌ನಲ್ಲಿರುವ ಒಟ್ಟು ಲೆಂಥ್ 128 ಕಿ.ಮೀ. ಅದರಲ್ಲಿ ನಾವು ಈಗ 64.ಕಿ.ಮೀ. ಅನ್ನು ಕಂಪ್ಲೀಟ್ ಮಾಡಿದ್ದೇವೆ, ಹಾಗೂ 150 ಕಿ.ಮೀ. ವರೆಗೆ ಪ್ರೋಸೆಸ್‌ನಲ್ಲಿದೆ. ಸರ್ವೆ ಇರತಕ್ಕಂಥಾದ್ದು 150 ರಿಂದ 175 ಕಿ.ಮೀ. ಇದು ವಿವಿಧ ಹಂತಗಳಲ್ಲಿ ಇದೆ. ಇದರಿಂದ 13 ಸಾವಿರ ಎಕರೆಗೆ ನೀರಾವರಿ ಆಗತಕ್ಕಂಥಾದ್ದು ಇದೆ. ಸಾಮಾನ್ಯವಾಗಿ ಒಂದು

ಮಾತನ್ನು ಹೇಳುವುದಾದರೆ 365-370 ಕಿ.ಮೀ. ಇರತಕ್ಕಂಥ ಕೆನಾಲ್ ಕೆಲಸದಲ್ಲಿ 300 ಕಿ.ಮೀ. ಕೆನಾಲ್‌ಗಳ ನಿರ್ಮಾಣ ಕಾರ್ಯ ಮುಗಿದಿದೆ. ಇನ್ನು ಉಳಿದಿರತಕ್ಕಂಥಾದ್ದು, ಇನ್‌ವೆಸ್ಟ್ ಮಾಡಬೇಕಾಗಿರತಕ್ಕಂಥಾದ್ದು ಕೇವಲ 50 ರಿಂದ 70 ಕಿ.ಮೀ. ಮಾತ್ರ. ಇನ್ನು ಉಳಿದಿರತಕ್ಕಂಥ ಕೆಲಸ ಎಂದರೆ ಸಿ.ಡಿ.ವರ್ಕ್ಸ್. ಆ ಸಿ.ಡಿ ವರ್ಕ್ಸ್‌ನ್ನು ಮಾಡಬೇಕು ಎಂದು ಈಗ ನಾವು ನಿರ್ಬಂಧ ಮಾಡಿದ್ದು, ಅಲ್ಲಿ ಪ್ರಗತಿ ಪ್ರಾರಂಭವಾಗಿದೆ. ಅಲ್ಲಿ ಅರ್ತ್ ಮೆಷಿನ್ ಇತ್ತು, ಜೆ.ಸಿ.ಬಿ.ಗಳು ಇದ್ದವು, ಮೋಟಾರ್‌ಗಳು ಇದ್ದವು, ಹೀಗೆ ಜಾಸ್ತಿ ಇದ್ದಂಥಾದ್ದನ್ನು ಹೊಡೆದುಕೊಂಡು ಹೋಗಿದ್ದರಿಂದ ಸಿ.ಡಿ.ವರ್ಕ್ಸ್‌ಗಳು ಆಗಿಲ್ಲ. ಕೆನಾಲ್ ಜೋನ್‌ನಲ್ಲಿ ಸಿ.ಡಿ. ವರ್ಕ್ಸ್‌ಗಳನ್ನು ಮಾಡಬೇಕು ಎಂದು ನಾವು ಜೋನ್ 1 ಮತ್ತು 2 ಕ್ಕೆ 400 ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿದ್ದೇವೆ. ಅಲ್ಲಿಗೆ ಇಬ್ಬರು ಐ.ಎ.ಎಸ್. ಅಧಿಕಾರಿಗಳನ್ನು ಹಾಕಿದ್ದೇವೆ. ಕಂಪ್ಲೀಟ್ ಪ್ರೋಗ್ರಾಂ ಮಾಡಿ, ಪ್ರೋಗ್ರಾಂಅನ್ನು ಸಾಧಿಸುವುದಕ್ಕೆ ಕೋಆರ್ಡಿನೇಟ್ ಮಾಡಬೇಕು ಎನ್ನುವ ಉದ್ದೇಶದಿಂದ ಅವರನ್ನು ಹಾಕಿದ್ದೇವೆ. ಮಾನ್ಯ ಯಡಿಯೂರಪ್ಪನವರು, ಅಲ್ಲಿಗೆ ಒಬ್ಬರನ್ನು ಟೆಕ್ನಿಕಲ್ ಡೈರೆಕ್ಟರ್ ಮಾಡಬೇಕು ಎಂದು ಹೇಳಿದ್ದಾರೆ. ಕಳೆದ ಬೋರ್ಡ್ ಮೀಟಿಂಗ್‌ನಲ್ಲಿ ನಮ್ಮ ಮುಖ್ಯ ಮಂತ್ರಿಯವರು ಪ್ರಿಸೈಡ್ ಮಾಡಿದಂಥ ಕೆ.ಇ.ಬಿ. ಮೀಟಿಂಗ್‌ನಲ್ಲಿ, ಇಬ್ಬರನ್ನೂ ಕೋಆರ್ಡಿನೇಟ್ ಮಾಡಲು ಒಬ್ಬರು ಟೆಕ್ನಿಕಲ್ ಡೈರೆಕ್ಟರ್ ಬೇಕಾಗುತ್ತದೆ ಎಂದು ಮಾತನಾಡಿದ್ದೇವೆ. ಅದನ್ನೂ ಸಹ ಮಾಡುತ್ತೇವೆ. ಅವರು ಟೆಕ್ನಿಕಲ್ ಪಾಯಿಂಟ್, ಅಡ್ಮಿನಿಸ್ಟ್ರೇಟಿವ್ ಪಾಯಿಂಟ್, ಫೈನಾನ್ಸ್ ಪಾಯಿಂಟ್‌ಗಳನ್ನು ಕೋಆರ್ಡಿನೇಟ್ ಮಾಡುತ್ತಾರೆ. ಫೈನಾನ್ಸ್ ಡೈರೆಕ್ಟರ್ ಮಾಡಿದ್ದೇವೆ. ಮ್ಯಾನೇಜಿಂಗ್ ಡೈರೆಕ್ಟರ್ ಮಾಡಿದ್ದೇವೆ. ಡೈರೆಕ್ಟರ್ ಮಾಡಿ, ಅವರು ಅಡ್ಮಿನಿಸ್ಟ್ರೇಟೀವ್ ಫೈನಾನ್ಸ್ ಮತ್ತು ಟೆಕ್ನಿಕಲ್ ಈಗ ಟೆಕ್ನಿಕಲ್ ಈ ಮೂರನ್ನು ಕೋಆರ್ಡಿನೇಟ್ ಮಾಡುವುದಕ್ಕೆ ಈ ಮೂರು ವರ್ಷಗಳಲ್ಲಿ ಮಾಡಬೇಕು ಎಂದು ಯೋಜನೆ ಹಾಕಿಕೊಂಡಿದ್ದೇವೆ. ಇನ್ನು ಬಹಳ ಪ್ರಾಮುಖ್ಯವಾಗಿ ಕೇಳಿದಂಥ ಲಿಫ್ಟ್ ಇರಿಗೇಷನ್ ಬಗ್ಗೆ ಹೇಳುತ್ತೇನೆ. ಬಿಜಾಪುರದಲ್ಲಿ ಮೂರುವರೆ ಲಕ್ಷ ಎಕರೆ ಜಮೀನು ಮುಳುಗುತ್ತದೆ. ಮುಳುಗಡೆಯಾಗತಕ್ಕಂಥವರ ಬಗ್ಗೆ ಎಲ್ಲರಿಗೂ ಅನುಕಂಪ ಇದೆ. ಯಾವುದೇ ಸರ್ಕಾರಕ್ಕೆ ಅನುಕಂಪ ಇಲ್ಲ ಎಂದು ನಾನು ಹೇಳುವುದಿಲ್ಲ. ಅವರು ತ್ಯಾಗಜೀವಿಗಳು ಎಂದು ನಾವು ಕರೆದಿದ್ದೇವೆ. ಅವರು ಏನು ಪರಿಹಾರ ಕೇಳಿದರೂ ಅದನ್ನು ಕೊಡಬೇಕು ಎಂದು ಮಾಡಿದ್ದೇವೆ. ಎಲ್.ಓ.ಸಿ. ಒಳಗೆ ಲ್ಯಾಂಡ್ ಕಾಂಪನ್‌ಸೇಷನ್ ಮೊದಲು ಕೊಡಬೇಕು ಎಂದು ಹೇಳಿದ್ದೇನೆ. ನೀರಾವರಿ ಇಲಾಖೆಯವರು ಯಾವುದೇ ಭೂಮಿಯನ್ನು ಸ್ವಾಧೀನ ಮಾಡಿಕೊಂಡಾಗ, ಕಾಂಟ್ರಾಕ್ಟರುಗಳ ಬಿಲ್ಲನ್ನು ಕೊಡದೇ ಹೋದರೂ ಸರಿ, ಭೂಮಿಯನ್ನು ಸ್ವಾಧೀನಪಡಿಸಿಕೊಂಡಂಥ ಭೂ ಮಾಲೀಕ ಯಾರಿದ್ದಾನೆ, ಆ ಭೂಮಿಯನ್ನು ಕಳೆದುಕೊಂಡವನೂ ಯಾರಿದ್ದಾನೆ, ಅವನಿಗೆ ಮೊಟ್ಟ ಮೊದಲಿಗೆ ಪರಿಹಾರ ದೊರಕಿಸಿ ಕೊಡಬೇಕು ಎಂದು ಸ್ಟ್ರಿಕ್ಟ್ ಸರ್ಕ್ಯುಲೇಷನ್ ಅನ್ನು ನೀರಾವರಿ ಇಲಾಖೆಯಲ್ಲಿ ಮಾಡಿದ್ದೇವೆ. ಆದ್ದರಿಂದ ಭೂಮಿಯನ್ನು ಕಳೆದುಕೊಂಡವರಿಗೆ ಮೊಟ್ಟ ಮೊದಲು ಪರಿಹಾರ ಕೊಡತಕ್ಕಂಥ ಕೆಲಸವನ್ನು ಮಾಡಿದ್ದೇವೆ. ಆಲಮಟ್ಟಿ ಎಡ ಮತ್ತು ಬಲದಂಡೆ ಕಾಲುವೆಗಳಿಗೆ ನಾನು 2-3 ಬಾರಿ ಅಲ್ಲ, 4-5 ಬಾರಿ ಹೋಗಿ ಬಂದಿದ್ದೇನೆ. ಬಸವನಗೌಡರು ಹೇಳಿದ ಹಾಗೆ ಒಂದು ಸಲ

ಹೆಲಿಕಾಪ್ಟರ್‌ನಲ್ಲಿ ಹೋಗಿದ್ದೆವು. ಮುಖ್ಯ ಕಾರ್ಯದರ್ಶಿಯವರು ಮತ್ತು ನಾವು ಅಥಣಿಗೆ ಹೋಗಬೇಕಾಗಿತ್ತು. ಕೃಷ್ಣಾ ನದಿ ಕಣಿವೆ ಆ ಭಾಗದಲ್ಲಿ ಅಥಣಿಯವರಿಗೆ ನದಿ ಹೇಗೆ ಹೋಗುತ್ತದೆ, ಎಷ್ಟು ಹಳ್ಳಿಗಳು ಮುಳುಗಡೆಯಾಗುತ್ತದೆ ಎನ್ನುವುದನ್ನು ನೋಡಬೇಕಾದರೆ ಹೆಲಿಕಾಪ್ಟರ್‌ನಿಂದಲೇ ಸಾಧ್ಯ ಎಂದು ನೋಡಿದ್ದೇವೆ. ಅವತ್ತು ಸಮಯವು ಕಡಿಮೆ ಇದ್ದುದರಿಂದ ಆ ಒಂದು ದಿವಸ ಹಾಗೆ ಮಾಡಿದ್ದೇವೆ. ತಮಗೆ ಗೊತ್ತಿರುವ ಹಾಗೆ ತಾವು, ನಾವು ಎಷ್ಟೋ ಸಲ ಭೇಟಿ ಮಾಡಿದ್ದೇವೆ. ರಾಜಶೇಖರ್‌ರವರು ಭೇಟಿ ಮಾಡಿದ್ದಾರೆ, ಜೆ.ಟಿ. ಪಾಟೀಲ್‌ರವರು ಭೇಟಿ ಮಾಡಿದ್ದಾರೆ, ಬಸವನಗೌಡರು ಭೇಟಿಯಾಗಿದ್ದಾರೆ ಶಿವಪುತ್ರಪ್ಪನವರು ಭೇಟಿಯಾಗಿದ್ದಾರೆ. ಬೇಕಾದಷ್ಟು ಸಲ ಮೀಟಿಂಗ್‌ಗಳನ್ನೂ ಮಾಡಿದ್ದೇವೆ. ಪರಿಹಾರವನ್ನು ಹುಡುಕಿದ್ದೇವೆ. ಒಂದು ಕಾಲದಲ್ಲಿ ಯಾವ ಸರ್ಕಾರದವರೇ ಆಗಲೀ, ಹೋದ ತಕ್ಷಣ ಮುತ್ತಿಗೆ ಹಾಕುತ್ತಿದ್ದರು.

ಶ್ರೀ ಬಸವರಾಜ್ ಆರ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಒಂದು ಸಲ ಸನ್ಮಾನ್ಯ ನಾಗೇಗೌಡರು ನಮ್ಮ ಕ್ಷೇತ್ರಕ್ಕೆ ಬಂದಾಗ, ಅವರ ಜೊತೆಯಲ್ಲಿ ನಾನೂ ಸಹ ಕೆನಾಲ್ ಸರ್ವೆ ಮಾಡುವ ಸಲುವಾಗಿ ಹೋದಾಗ ಅಲ್ಲಿ ಒಬ್ಬ ರೈತ, ನನ್ನ ಹೊಲದಲ್ಲಿ ಕೆನಾಲ್ ಆಗಿ ಇಷ್ಟು ವರ್ಷ ಆದರೂ ನನಗೆ ಇನ್ನೂ ಪರಿಹಾರ ಕೊಟ್ಟಿಲ್ಲ ಎಂದು ರಸ್ತೆಗೆ ಕಲ್ಲು ಹಾಕಿ ಅಡ್ಡಗಟ್ಟಿ ನಿಲ್ಲಿಸಿದ. ಅವನಿಗೆ ಇಲ್ಲಿಯ ತನಕವೂ ಪರಿಹಾರ ಸಿಕ್ಕಿಲ್ಲ. ತಾವು ಒಂದು ಚೀಟಿಯನ್ನೂ ಅವನಿಗೆ ಕೊಟ್ಟಿದ್ದೀರಿ. ನಾನು ಆ ಸಂದರ್ಭದಲ್ಲಿ ಇದ್ದೆ. ಇದಕ್ಕೆ ಸಂಬಂಧಪಟ್ಟಂತೆ ಮುಂದೆ ಯಾವ ರೀತಿ ಕ್ರಮವಾಗಿದೆ ಎನ್ನುವುದನ್ನು ತಾವು ಅಧಿಕಾರಿಗಳಿಂದ ತಿಳಿದುಕೊಂಡು ಅವನಿಗೆ ಆದಷ್ಟು ತೀವ್ರವಾಗಿ ಪರಿಹಾರವನ್ನು ಕೊಡಬೇಕು ಎಂದು ತಾವು ತಿಳಿಸಬೇಕೆಂದು ನಾನು ಈ ಸಂದರ್ಭದಲ್ಲಿ ಮನವಿ ಮಾಡುತ್ತಿದ್ದೇನೆ.

ಶ್ರೀ ಕೆ. ಎನ್. ನಾಗೇಗೌಡ : ಅದನ್ನು ನಾನು ನೋಡುತ್ತೇನೆ. ಅವರು ಈಗ ಹೇಳಿದ್ದಾರೆ. ಇದನ್ನು ಅಧಿಕಾರಿಗಳು ನೋಟ್ ಮಾಡಿಕೊಂಡಿರುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ಅದನ್ನು ಕೂಡಲೇ ಕೊಡಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಆಲಮಟ್ಟಿ ಎಡದಂಡೆ ಮತ್ತು ಬಲದಂಡೆ ಕಾಲುವೆಗಳಲ್ಲಿ ಸುಮಾರು 36,000 ಎಕರೆ ನೀರಾವರಿ ಆಗತಕ್ಕಂಥಾದ್ದು. ಎಷ್ಟು ಪ್ರೋಗ್ರೆಸ್ ಆಗಿದೆ ಎನ್ನುವುದನ್ನು ನೋಡಿ ಒಂದು ಒಳ್ಳೆಯ ಮಾತನಾಡಿ ಖರ್ಗೆಯವರೇ. ಕೆಲಸ ಮಾಡಿದಾಗ ಒಳ್ಳೆಯ ಮಾತನಾಡಿ ಹಿಪ್ಪರಗಿ ಬ್ಯಾರೇಜ್ ಬಗ್ಗೆ ಯಾರೋ ಮಾತನಾಡಿದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾಗೇಗೌಡರು ಸ್ವಲ್ಪ ಚೆನ್ನಾಗಿ ಮಾತನಾಡಿ, ಒಳ್ಳೆಯದಾಗಿ ಮಾತನಾಡಿ ಎಂದರು. ನಮ್ಮ ಪರಿಸ್ಥಿತಿ ಹೇಗಾಗಿದೆ ಎಂದರೆ, ಹಳ್ಳಿಯ ತೋಟದಲ್ಲಿ ಒಂದು ಗಾವಿನ ಗಿಡ ಹಾಕಿ, ಅದನ್ನು ಬೆಳೆಸಿ, ಫಲ ಬರಬೇಕಾದರೆ ಕನಿಷ್ಟ 5-6 ವರ್ಷ ಹಿಡಿಯುತ್ತದೆ. ಈಗ ಹೈಬ್ರಿಡ್ ಬಹಳ ಬೇಗ ಬರುತ್ತದೆ. ಅದನ್ನು ನಿಮ್ಮ ಕಡೆ ಉಪಯೋಗ ಮಾಡುತ್ತಿರಬಹುದು. ಹೆಚ್ಚು ಕಡಿಮೆ, ನಮ್ಮ ಕಡೆ ಇನ್ನೂ ಹೈಬ್ರಿಡ್ ಗಿಡಗಳನ್ನು ಉಪಯೋಗ ಮಾಡುತ್ತಿಲ್ಲ. ಬಿಜಾಪುರ ಮತ್ತು ಕೋಲಾರದಲ್ಲಿ ಮಾಡಿದ ಹಾಗೆ. ಅದು ಫಲ ಬರಬೇಕಾದರೆ 6-7 ವರ್ಷಗಳು ಬೇಕಾಗುತ್ತದೆ. ಕೊನೆಗೆ ಹೈಬ್ರಿಡ್ ತಳಿಯಿಂದ ಹಣ್ಣು ಬಂದ ಮೇಲೆ ಅದನ್ನು ಕಡಿದುಕೊಂಡಾಗ ಅದು ಬೇರೆ

ಗಿಡವನ್ನು ನೋಡಿ, ನೋಡಪ್ಪಾ, ನಿಮ್ಮಪ್ಪ ಏಳು ವರ್ಷ ಕಷ್ಟಪಟ್ಟು ನೀರು ಹಾಕಿದ, ಏನೆಲ್ಲಾ ಮಾಡಿದ. ಆದರೂ ಇಷ್ಟು ವರ್ಷದಲ್ಲಿ ಒಂದು ದಿವಸವಾದರೂ ಹಣ್ಣು ಕೊಟ್ಟಿಲ್ಲ, ನೋಡು ನಾನು ಎರಡೇ ದಿವಸಗಳಲ್ಲಿ ಬಂದು ಹಣ್ಣು ಕೊಟ್ಟೆ ಎಂದು ಅಂದಹಾಗೆ ಆಗಿದೆ. ಹಾಗೆ ನಾವು ಆಲಮಟ್ಟಿಯನ್ನು 509 ಮೀಟರ್‌ನಲ್ಲಿ 504 ಮೀಟರ್‌ವರೆಗೆ ಕನ್‌ಸ್ಟ್ರಕ್ಟ್ ಮಾಡಿ ಎತ್ತರವನ್ನು ಮಾಡಿದ್ದಕ್ಕೆ, ಅದನ್ನು ಇವರು ಹೇಳುವುದಿಲ್ಲ . ಅದರ ಮೇಲೆ 5 ಮೀಟರ್ ಹೆಚ್ಚು ಮಾಡಿದ್ದಕ್ಕೇ ಇದು ನನ್ನದು, ಇದು ನನ್ನದು ಎಂದು ಅದನ್ನೇ ಹೇಳುತ್ತಾ ಹೋದರೆ ನಾವು ಎಷ್ಟು ಸಲ ಕೇಳುವುದು. ಹಾಗೆ ಇವರ ಕಥೆಯಾಗಿದೆ.

ಅಧ್ಯಕ್ಷರು : ಅವರು ಇನ್ನೂ 504ರಲ್ಲೇ ಇದ್ದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಲ್ಲೇ ಇದ್ದರೂ ಕೂಡ ಅದನ್ನು ಅವರು ಹೇಳುವುದಿಲ್ಲ. ಅವರು ಮರೆತೇ ಹೋಗಿದ್ದಾರೆ. ಅದನ್ನು ಅವರು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಹಿಂದೆ ಅವರು ಇದ್ದರು ಎನ್ನುವುದನ್ನು• ಅವರು ಗಮನದಲ್ಲೇ ಇಟ್ಟುಕೊಂಡಿಲ್ಲ.

ಶ್ರೀ ಕೆ. ಎನ್. ನಾಗೇಗೌಡ : ಗಮನದಲ್ಲಿ ಇಟ್ಟುಕೊಂಡಿದ್ದೇವೆ. ಮೊಯ್ಲಿಯವರನ್ನು ನೋಡಿದ ತಕ್ಷಣ ಜ್ಞಾಪಕವಾಗುವುದಿಲ್ಲವೇ? ಮೊಯ್ಲಿಯವರನ್ನು ನೋಡಿದ ತಕ್ಷಣ ಅವರ ಮಂತ್ರಿ ಮಂಡಲದಲ್ಲಿ ಇದ್ದೆ ಎಂದು ನನಗೆ ಅನ್ನಿಸುವುದಿಲ್ಲವೇ? ನಾನು ಅಷ್ಟೊಂದು ಅನ್‌ಗ್ರೇಟ್‌ಫುಲ್ ಆಗಿ ಎಂದೂ ನಡೆದುಕೊಳ್ಳುವುದಿಲ್ಲ. ನಡೆದುಕೊಳ್ಳಲು ಆಗುವುದೂ ಇಲ್ಲ. ರಾಜಕಾರಣಿಗಳು ಹಾಗೆ ನಡೆದುಕೊಳ್ಳಲೂ ಬಾರದು. ನಾವು, ನೀವು, ಅವರು ಎಲ್ಲಾ ಒಟ್ಟಿಗೆ ಇದ್ದೆವು. ರಮೇಶ್ ಕುಮಾರ್‌ರವರು, ನೀವು ನಾವು ಎಲ್ಲಾ ಒಟ್ಟಿಗೆ ಇದ್ದೆವು. ನಮಗಿಂತ ಮೊದಲೇ ರಘುಪತಿಯವರು, ಪುಟ್ಟದಾಸ್‌ರವರು, ನಜೀರ್‌ರವರು ಎಲ್ಲರೂ ಬಿಟ್ಟು ಹೋದರು. ಈಗ ಅವರ ಹಿಂದೆ ನಾವು ಹೋಗಿದ್ದೇವೆ. ನೀವು ಎಲ್ಲಿ ಹೋಗುತ್ತೀರೋ, ನಿಮ್ಮ ಹಿಂದೆ ನಾನು ಬರುತ್ತೇನೆ.

ಅಧ್ಯಕ್ಷರು : ನಾನು ಪ್ರಯಾಣವನ್ನೇ ಬಿಟ್ಟುಬಿಟ್ಟಿದ್ದೇನೆ.

ಶ್ರೀ ಕೆ. ಎನ್. ನಾಗೇಗೌಡ : ನೀವು ಅಲ್ಲೇ ಇದ್ದರೆ, ನಾನು ಇಲ್ಲೇ ಇರುತ್ತೇನೆ. ಇನ್ನು ಮಲಪ್ರಭಾ ಮತ್ತು ಘಟಪ್ರಭಾ ಬಗ್ಗೆ ರಾಜಶೇಖರ್‌ರವರು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಜೆ. ಟಿ. ಪಾಟೀಲ್ : ಏತ ನೀರಾವರಿ ವಿಚಾರವನ್ನು ಬಿಟ್ಟು ಈಗ ಮಲಪ್ರಭಾಕ್ಕೆ ಹೋಗಿದ್ದೀರಿ. ಅರಕಲ್ಲು ವಿಷಯವನ್ನು ನಾನು ಕೇಳಿದೆ.

ಶ್ರೀ ಕೆ. ಎನ್. ನಾಗೇಗೌಡ : ಅರಕಲ್ಲು, ಚಿಮ್ಮಲಗಿ ಎಲ್ಲವನ್ನೂ ಅವಸರದಲ್ಲಿ ಚರ್ಚೆಮಾಡುವುದು ಬೇಡ. ಗುತ್ತಿಬಸವಣ್ಣನದೂ ಸಹ ಆಮೇಲೆ ತೆಗೆದುಕೊಳ್ಳೋಣ.

ಶ್ರೀ ಬಸವನಗೌಡ ಆರ್ ಪಾಟೀಲ್ : ಮುಳವಾಡದ ಏತ ನೀರಾವರಿಯದನ್ನು ಹೇಳಿ.

ಶ್ರೀ ಕೆ. ಎನ್. ನಾಗೇಗೌಡ : ಗೌಡರೇ, ನಿಮ್ಮಲ್ಲಿ ನನ್ನ ಪ್ರಾರ್ಥನೆ ಏನೆಂದರೆ ಇಲ್ಲಿ ಡಿಸ್ಪ್ಯೂಟ್ಸ್ ಇರುವುದರಿಂದ ಗುತ್ತಿಬಸವಣ್ಣ , ಅರೆಕಲ್ಲು, ಚಿಮ್ಮಲಗಿ ಈ ಮೂರನ್ನೂ ನಾವೂ ನೀವೂ ಸೇರಿ

ಬೇಕಾದಷ್ಟು ಸಲ ಚರ್ಚೆ ಮಾಡಿದ್ದೇವೆ. ಇನ್ನೂ ಒಂದು ಸಲ ಚರ್ಚೆ ಮಾಡೋಣ. ಮುಳವಾಡ ಏತ ನೀರಾವರಿಯ ಬಗ್ಗೆ ಹೇಳುವುದಾದರೆ, ಇದರ ಲೆಂತ್ ಇರುವುದು 128.50 ಕಿ.ಮೀ. ಎಂದು ತಮಗೆ ಗೊತ್ತಿದೆ. ಇವತ್ತು ನಾವು ಮುಳವಾಡ ಏತ ನೀರಾವರಿಯಲ್ಲಿ ಬಹಳ ವೇಗವಾಗಿ ಪ್ರೋಗ್ರೆಸ್ ಮಾಡಿದ್ದೇವೆ. ತಾವೂ ಇದನ್ನು ಒಪ್ಪುತ್ತೀರಿ. ಒಂದು ಸಲ ನೀವೂ ನಾವು ಅಲ್ಲಿಗೆ ಹೋಗಿದ್ದೆವು. ಅಲ್ಲಿ ಫೌಂಡೇಷನ್‌ವರೆಗೆ ವರ್ಕ್ ಬಂದಿದೆ.

ಶ್ರೀ ಜೆ. ಟಿ. ಪಾಟೀಲ್ : 128 ಕಿ.ಮೀ. ಇರುವ ಕೆನಾಲ್ ವರ್ಕ್‌ನಲ್ಲಿ ಒಂದು ಇಂಚೂ ಸಹ ಕೆಲಸ ಆಗಿಲ್ಲ.

ಶ್ರೀ ಕೆ. ಎನ್. ನಾಗೇಗೌಡ : ದಯವಿಟ್ಟು ಒಂದನ್ನು ತಾವು ಲಿಫ್ಟ್ ಇರಿಗೇಷನ್ ವಿಚಾರಗಳಲ್ಲಿ ಅರ್ಥ ಮಾಡಿಕೊಳ್ಳಬೇಕು. ಮೊದಲು ಹೆಡ್‌ವರ್ಕ್ಸ್ ಮುಗಿಸಿ ಬಿಡೋಣ. ಆಮೇಲೆ ಲಿಫ್ಟ್ ಇರಿಗೇಷನ್ ಮಾಡಿಕೊಳ್ಳತಕ್ಕಂಥಾದ್ದು ಸೂಕ್ತ. ಹಿಪ್ಪರಗಿ ಬ್ಯಾರೇಜ್ ವಿಷಯವನ್ನು ಮಾನ್ಯ ಲೀಲಾದೇವಿ ಪ್ರಸಾದ್‌ರವರು ಹೇಳಬೇಕು. ಅವರು ಇಲ್ಲೇ ಇದ್ದಾರೆ. ಅದು ಮುಳವಾಡ ಇರಲಿ, ರಾಮಪುರ ಇರಲಿ, ಇಂಡಿ ಇರಲಿ ಹಾಗೇ ಮಾಡಬೇಕು. ಇಂಡಿಯಲ್ಲಿ 150 ಹೆಡ್‌ವರ್ಕ್ಸ್ ಮಾಡುತ್ತಿದ್ದೇವೆ. ರಾಮಪುರದಲ್ಲಿ ಹೆಡ್‌ವರ್ಕ್ಸ್‌ನ್ನು ನಾವೂ ನೋಡಿದ್ದೇವೆ, ನೀವು ನೋಡಿದ್ದೀರಿ. ಮುಳುವಾಡದಲ್ಲಿ ಹೆಡ್‌ವರ್ಕ್ಸ್ ಮಾಡುತ್ತಿದ್ದೇವೆ. ಅಲ್ಲಿ ತುಂಬಾ ಪ್ರೋಗ್ರೆಸ್ ಆಗಿದೆ. ಹೆಡ್‌ವರ್ಕ್ಸ್ ಮುಗಿಯಲಿ. ಹೆಡ್‌ವರ್ಕ್ಸ್ ಮುಗಿದ ತಕ್ಷಣ ಕೆನಾಲ್‌ಗಳ ಕೆಲಸವನ್ನು ತೆಗೆದುಕೊಳ್ಳುತ್ತೇವೆ. ಈ ಮೂರರಲ್ಲಿ ಕಾಲುವೆಗಳ ಉದ್ದ 37.ಕೀ.ಮೀ. 128 ಕಿ.ಮೀ ಮತ್ತು ಇಂಡಿಯಲ್ಲಿ 96 ಕಿ.ಮೀ. ಏನಿದೆ ಇಷ್ಟನ್ನೂ ಮಾಡುವುದಕ್ಕೆ ಈಗ ನಾವು ಕ್ರಮ ಕೈಗೊಂಡಿದ್ದೇವೆ. ಇಂಡಿಯದು ಸರ್ವೆ ಮಾಡಿಸಲು ಸೇರಿಸಿದ್ದೇವೆ.

ಶ್ರೀ ಬಸವನಗೌಡ ಆರ್ ಪಾಟೀಲ್ : ತಾವು ದಯವಿಟ್ಟು ಗುತ್ತಿ ಬಸವಣ್ಣನ ಬಗ್ಗೆ ಹೇಳಿ.

ಶ್ರೀ ಕೆ. ಎನ್. ನಾಗೇಗೌಡ : ಗುತ್ತಿ ಬಸವಣ್ಣನ ವಿಚಾರವನ್ನು ನಾನು ನಿಮಗೆ ಹೇಳುತ್ತೇನೆ. ಇಲ್ಲ ಎಂದು ನಾನು ಹೇಳಿಲಿಲ್ಲ. ಅದನ್ನು ನಿಮಗೆ ನಾನು ಹೇಳುತ್ತೇನೆ. ಆ ವಿಚಾರವಾಗಿ ನಾನು ನಿಮ್ಮ ಜೊತೆ ಮಾತನಾಡುತ್ತೇನೆ. ಏಕೆಂದರೆ ಅದು ಎರಡನೇ ಹಂತದ ಸ್ಕೀಮ್‌ನಲ್ಲಿ ಸೇರಿದೆ ದಯವಿಟ್ಟು ಸ್ವಲ್ಪ ಅವಕಾಶ ಕೊಡಿ.

ಶ್ರೀ ಬಸವನಗೌಡ ಆರ್ ಪಾಟೀಲ್ : ಎರಡನೇ ಹಂತದಲ್ಲಿ ಸೇರುವಂಥಾದ್ದಕ್ಕೆ ನೀವು ಅಡಿಗಲ್ಲು ಇಟ್ಟಿದ್ದೀರಿ. ಒಂದು ಸರ್ವೆ ಮಾಡಲು, ಅಡಿಗಲ್ಲು ಇಡಲು ಪ್ರಧಾನ ಮಂತ್ರಿಗಳು ಹೋಗಬೇಕು ಎಂದರೆ ಹೇಗೆ?

ಶ್ರೀ ಕೆ. ಎನ್. ನಾಗೇಗೌಡ : ಬಸವನಗೌಡರೇ, ನಾನು ನಿಮ್ಮ ಜೊತೆ ಮಾತನಾಡುತ್ತೇನೆ. ನಮ್ಮ ಮಾನ್ಯ ಸ್ನೇಹಿತರು ಮಲಪ್ರಭಾ ಮತ್ತು ಘಟಪ್ರಭಾ ವಿಚಾರದಲ್ಲಿ ಮಾತನಾಡಿದ್ದಾರೆ. ನಾವು ಮಲಪ್ರಭಾಕ್ಕೆ ಇದುವರೆಗೆ ಅಂದರೆ 3-9-97ರ ವರೆಗೆ ಖರ್ಚು ಮಾಡಿರತಕ್ಕಂಥಾದ್ದು ಸುಮಾರು 427 ಕೋಟಿ ರೂಪಾಯಿಗಳು. ನಮಗೆ ಇನ್ನೂ ಸುಮಾರು 180 ಕೋಟಿ ರೂಪಾಯಿಗಳು ಬೇಕು.

ತಮಗೆ ಗೊತ್ತಿರಬಹುದು, ರೋಣದಿಂದ ಬಾದಾಮಿಯವರೆಗೆ ಮಲಪ್ರಭಾಗೆ ಕೆನಾಲ್ ವರ್ಕ್ ಮಾಡಿದ್ದೇವೆ. ಪ್ರೋಗ್ರೆಸ್ ನಡೆಯುತ್ತಿದೆ.

ಶ್ರೀ ಚಂದ್ರಕಾಂತ ಬೆಲ್ಲದ್ : ಅಲ್ಲಿ ಕೆನಾಲ್ ಆಯಿತು. ಆದರೆ ಅಲ್ಲಿ ನೀರು ಹೋಗಬೇಕಾದರೆ ಮಹದಾಯಿ ಬರಬೇಕಾಗುತ್ತದೆ. ಮಹದಾಯಿ ಬರದೇ ಇದ್ದರೆ, ಹಣವನ್ನು ಖರ್ಚು ಮಾಡಿ ಕೆನಾಲ್ ಮಾಡಿದರೂ ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ಕೆ. ಎನ್. ನಾಗೇಗೌಡ : ಈ ವರ್ಷ ಮಲಪ್ರಭಾಕ್ಕೆ ಕೇಂದ್ರ ಸರ್ಕಾರದಿಂದ 24 ಕೋಟಿ ರೂಪಾಯಿಗಳಷ್ಟು ಹಣ ಬರುತ್ತಿದೆ.

(ಈ ಹಂತದಲ್ಲಿ ಸದಸ್ಯರಾದ ಶ್ರೀ ರಾಜಶೇಖರ್ ಶೀಲವಂತ್‌ರವರು ಮಾತನಾಡಲು ಎದ್ದರು)

ರಾಜಶೇಖರ್‌ರವರೇ ನಾನು ಉತ್ತರ ಕೊಟ್ಟುಬಿಡುತ್ತೇನೆ. ನೀವು ಗುರುತು ಹಾಕಿಕೊಳ್ಳಿ. ತಮಗೇನಾದರೂ ಡೌಟ್ ಇದ್ದರೆ ಅನಂತರ ನನ್ನನ್ನು ಆಮೇಲೆ ಕೇಳಿ, ಉತ್ತರ ಹೇಳುತ್ತೇನೆ. ಮಲಪ್ರಭಾಕ್ಕೆ ಇನ್ನೂ ನಾವು 80 ಕೋಟಿ ರೂಪಾಯಿಗಳವರೆಗೆ ಖರ್ಚು ಮಾಡಬೇಕು. ನನಗೆ ತಿಳಿದಿರುವಂತೆ ಈ ವರ್ಷ ಬಜೆಟ್‌ನಲ್ಲಿ ನಾವು 33 ಅಥವಾ 34 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಕೇಂದ್ರ ಸರ್ಕಾರದ ವತಿಯಿಂದ ಈ ವರ್ಷ ನಮ್ಮ ಯೋಜನೆಗಳಾದ ಯುಕೆಪಿಗೆ 100 ಕೋಟಿ. ಘಟಪ್ರಭಾಕ್ಕೆ 8 ಕೋಟಿ ಮತ್ತು ಮಲಪ್ರಭಾಕ್ಕೆ 24 ಕೋಟಿ ರೂಪಾಯಿಗಳು ಬರಲಿದೆ.

1,50 ಪಿ.ಎಂ.

ಘಟಪ್ರಭಾಕ್ಕೆ 8 ಕೋಟಿ ರೂಪಾಯಿಗಳು ಮಲಪ್ರಭಾಕ್ಕೆ 24 ಕೋಟಿ ರೂಪಾಯಿಗಳು ಕಾರಂಜಕ್ಕೆ 6 ಕೋಟಿ ರೂಪಾಯಿಗಳು ಒಟ್ಟು ಐಆರ್‌ಡಿಸಿ ಪ್ರೋಗ್ರಾಮ್ ಲೋನ್‌ನಲ್ಲಿ 144 ಕೋಟಿ ರೂಪಾಯಿಗಳು ಸ್ಯಾಂಕ್ಷನ್ ಲೆಟರ್ ನಮಗೆ ಕಳಿಸಿದ್ದಾರೆ. ಇದಕ್ಕೆ ನಾವೆಲ್ಲಾ ಪ್ರೋಗ್ರಾಮ್ ಹಾಕಿಕೊಂಡಿದ್ದೇವೆ. ಬಾದಾಮಿ ಮತ್ತು ರೋಣದಲ್ಲಿ ಮಾಡುತ್ತೇವೆ. ಘಟಪ್ರಭಾಕ್ಕೆ 8 ಕೋಟಿ ರೂಪಾಯಿಗಳು ಅದು ಕಡಿಮೆ ಆಗಿದೆ. ಘಟಪ್ರಭಾಕ್ಕೆ ಜಾಸ್ತಿ ಕೊಡಬೇಕೆಂದು ಹೇಳಿ ಇನ್ನೊಂದು ಪತ್ರವನ್ನು ಬರೆದಿದ್ದೇವೆ. ಘಟಪ್ರಭಾಕ್ಕೆ ಇಲ್ಲಿಯವರೆವಿಗೆ ಖರ್ಚು ಮಾಡಿರತಕ್ಕಂಥದ್ದು 280 ಕೋಟಿ ರೂಪಾಯಿಗಳು ಇನ್ನೂ ಸಹ 500 ಕೋಟಿ ರೂಪಾಯಿಗಳಿಗಿಂತಲೂ ಜಾಸ್ತಿ ಹಣ ಬೇಕಾಗುತ್ತದೆ. ಎಲ್ಲದ್ದಕ್ಕಿಂತ ಮೂಲಭೂತವಾಗಿ ರಾಜಶೇಖರ್‌ರವರು ಒಂದು ಮಾತನ್ನು ಚೆನ್ನಾಗಿ ಹೇಳಿದ್ದಾರೆ. ಯುಕೆಪಿ ಕಡೆ ಗಮನ ಕೊಟ್ಟಿದ್ದೇವೆ. ನಾವು ಮಲಪ್ರಭಾ ಮತ್ತು ಘಟಪ್ರಭಾ ಹಾಗೂ ತುಂಗಭದ್ರಾ ಕಡೆ ತುಂಬಾ ಗಮನ ಕೊಟ್ಟಿದ್ದು ಕಡಿಮೆಯಾಗಿದೆ ಅದನ್ನು ಮಾಡಬೇಕೆಂಬ ಮಾತನ್ನು ಹೇಳಿದರು. ಯುಕೆಪಿಯಲ್ಲಿರುವಂತಹದ್ದು 173 ಟಿಎಂಸಿ, ಈಗ ಘಟಪ್ರಭಾ ಮತ್ತು ಮಲಪ್ರಭಾದಲ್ಲಿರುವಂಥದ್ದು 144 ಟಿಎಂಸಿ ನಮಗೆ ಘಟಪ್ರಭಾಕ್ಕೂ ಇನ್ನು ರೈಟ್ ಬ್ಯಾಂಕ್ ಕ್ಯಾನಲ್ ಆಗಬೇಕು. ಮಲಪ್ರಭಾಕ್ಕೂ ರೋಣಗುಂಟ ರೈಟ್ ಬ್ಯಾಂಕ್ ಕ್ಯಾನಲ್ ಆಗಬೇಕು. ಅದಕ್ಕೆ ನಾವು ಈ ಸಾರಿ 8,432 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ನಾವು ಈ ಎರಡು ಯೋಜನೆಗಳಿಗೆ ತಂದಿದ್ದೇವೆ. ಈಗ

ಕಾಗದ ಬರೆದು ಕೇಂದ್ರಸರ್ಕಾರಕ್ಕೆ ಇನ್ನೊಂದು 50 ಕೋಟಿ ರೂಪಾಯಿ ಹಣವನ್ನು ಇವೆರಡಕ್ಕೂ ಕೊಡಬೇಕು. ಈ ಬಡ್ಜೆಟ್ ಅಲೋಕೇಷನ್ ಇನ್‌ಕ್ರೀಸ್ ಮಾಡಬೇಕು ಎಂದು ಹೇಳಿದ್ದೇವೆ. ನಮ್ಮ ಮಾಂಡವಿ ಬಗ್ಗೆ ಅದನ್ನು ಕಳಸ ಹತ್ತಿರ ಮಾಡಬೇಕೆಂದು ಹೇಳಿ ಒಪ್ಪಿಕೊಂಡಿದ್ದರು. ಕಳಸ ಹತ್ತಿರ ಮಾಡುವುದಕ್ಕೆ ಡಿಸ್‌ಕ್ರಿಷನ್ ಕಮಿಟಿಯವರು 500 ಟಿಎಂಸಿ ನೀರನ್ನು ಮಾಂಡವಿಯಿಂದ ಡೈವರ್ಟ್ ಮಾಡಿ ಮಹದಾಯಿಗೆ ತರಬೇಕೆಂದು ಮಾಡಿದ್ದರು. ಆದ್ದರಿಂದ ಸಧ್ಯದಲ್ಲೇ ನಾವು ಗೋವಾ ಅವರ ಜೊತೆ ಮಾತುಕತೆ ಮಾಡುತ್ತೇವೆ. ಈಗ ಎರಡು ರೌಂಡ್ ಮಾತುಕತೆಯಾಗಿದೆ. ಇನ್ನು ಕೊನೆಯದಾಗಿ ಮುಖ್ಯಮಂತ್ರಿಗಳು, ಗೋವಾದ ಮುಖ್ಯಮಂತ್ರಿಗಳು ಇಬ್ಬರೂ ಸಹ ಖುದ್ದಾಗಿ ಮಾತನಾಡಿದ್ದಾರೆ.

ಒಬ್ಬ ಸದಸ್ಯರು : ಇವೆಲ್ಲಾ ಮಾತುಕತೆ ಆಡಿ ಈಗಾಗಲೇ ಒಂದು ವರ್ಷ ಆಯಿತು.

ಅಧ್ಯಕ್ಷರು : ಅವರಿಗೆ ಹೇಳುವುದಕ್ಕೆ ಬಿಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಇವತ್ತು ನೀವು ನೀರಾವರಿ ಬಗ್ಗೆ ಅಲ್ಲ, ಪುನರ್ ವಸತಿ ಯಾವ ರೀತಿಯಾಗಿ ಮಾಡಿದ್ದೀರಾ? ನಾವು ಹೇಳುವಂಥದು ಯಾವುದಕ್ಕೂ ಉತ್ತರ ಇಲ್ಲ. ಅವರು ಪರಿಹಾರ ಕೊಡುವುದಕ್ಕೆ ಸಿದ್ಧ ಇಲ್ಲ. ಕಳಕಳಿಯಿಲ್ಲದ ನಿಮ್ಮ ಸರ್ಕಾರದ ವೈಖರಿ ಏನಿದೆ, ಈಗಲಾದರೂ ಪುನರ್ ವಸತಿ ಮಾಡುವುದರ ಬಗ್ಗೆ ಯೋಚನೆ ಮಾಡಿ. ಆಲಮಟ್ಟಿ ಡ್ಯಾಂ ಪೂರ್ಣ ಆದಾಗ ಏನಾಗುತ್ತದೆ? ಅವರೆಲ್ಲರಿಗೂ ಸೈಟ್ ಕೊಡಿ. ಪರಿಹಾರವನ್ನು ಒಂದು ಗಂಟೆಯಲ್ಲಿ ಕೊಡಿ ಅಂದೆ. ನಿಮ್ಮ ಕಂದಾಯ ಮಂತ್ರಿಗಳ ಬಾಯಿಯಿಂದ ಉತ್ತರ ಬರಲಿಲ್ಲ. ಈಗ ಹೇಳಿದರು ಹಾರಂಗಿ ಮುಳುಗಡೆ ಆಯಿತು ಎಂದು. 10 ಸಾವಿರ ಎಕರೆ ಮುಳುಗಡೆ ಆಗಿದೆ. ಅವರಿಗೆ ಪರಿಹಾರವನ್ನು ಘೋಷಣೆ ಮಾಡಲಿಲ್ಲ. 1992 ರಲ್ಲಿ ರೇಟ್ ಫಿಕ್ಸ್ ಮಾಡಿದ್ದು ನಾವು 1997ರಲ್ಲಿ ಇದ್ದೇವಲ್ಲಾ ಈಗ ಫಿಕ್ಸ್ ಮಾಡುವುದಕ್ಕೆ ರೆಡಿ ಇಲ್ಲ. ನಿಮಗೆ ರೈತರ ಬಗ್ಗೆ ಕಳಕಳಿ ಇದೆಯಾ? ಅವರ ಸರ್ವ ನಾಶವಾಯಿತು. ಅವನ ಮೇಲೆ ಇವರು ಅಣೆಕಟ್ಟು ಕಟ್ಟಿ, ಇವರು ಆಡಳಿತ ನಡೆಸುತ್ತಾರೆ ಸ್ವಾಮಿ. ಇದನ್ನು ನಾವು ಪ್ರತಿಭಟನೆ ಮಾಡಿ ಹೊರ ಹೋಗುತ್ತೇವೆ.

(ಮಾನ್ಯ ಶ್ರೀ ಯಡಿಯೂರಪ್ಪನವರು ಹಾಗೂ ಭಾರತೀಯ
ಜನತಾ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಕೆ. ಎನ್. ನಾಗೇಗೌಡ : ನಾನು ಒಂದು ನೋಡುತ್ತಿದ್ದೇನೆ. ನೀವು ವಿರೋಧ ಪಕ್ಷದವರು ಭಾಷಣ ಮಾಡಿ, ನಮಗೆ ಪತ್ರಿಕೆಗಳ ಮೇಲೆ ಬಹಳ ಇಷ್ಟ ಅಂದಿರಿ. ಭಾಷಣ ಮಾಡಿದ ಮೇಲೆ ಉತ್ತರವನ್ನು ಕೇಳುವ ಹಾಗೇ ಇಲ್ಲಾ? ಅರ್ಧಕ್ಕೆ ಹೋಗಿಬಿಡುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ನಿಮ್ಮ ಉತ್ತರ ಹಾಗೆ ಇದೆ.

ಶ್ರೀ ಕೆ. ಎನ್. ನಾಗೇಗೌಡ : ನೀವು ಕೇಳಿದ ಹಾಗೆ ಅಲ್ಲ ನಾವು ಉತ್ತರ ಕೊಡುವುದು. ಸರ್ಕಾರದ ಉತ್ತರ ಏನಿದೆ ಅದನ್ನು ನಾವು ಕೊಡಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ; ನಾಗೇಗೌಡರೆ, ಉತ್ತರ ಕೊಡುವವರೆಗೆ ನಾನು ಮೊದಲು ಏನು ಕ್ಲಾರಿಫಿಕೇಷನ್ ಕೇಳಿದ್ದೆ. ನೀವು ಅದಕ್ಕೆ ಸ್ವಲ್ಪ ಹಾರಿಕೆ ಉತ್ತರವನ್ನು ಕೊಟ್ಟಿದ್ದೀರಿ ಈಗ ಆಲಮಟ್ಟಿದ್ದೆ ನೀವು ಹೇಳಿದ್ದಿರಿ. ಲೆಫ್ಟ್ ಬ್ಯಾಂಕ್ ಕ್ಯಾನಲ್ ಮತ್ತು ರೈಟ್ ಬ್ಯಾಂಕ್ ಕ್ಯಾನಲ್ ಬಗ್ಗೆ ಅದು 93 ಕಿ.ಮೀ. ಅದರಲ್ಲಿ ನೀವು ಎಕ್ಸಿಕ್ಯೂಟ್ ಮಾಡಿದ್ದೆ 24.ಕಿ.ಮೀ ಸ್ವಲ್ಪ ಕೇಳಿ ,75kms yet to be surveyed and executed. ನಾನು ಎಲ್ಲಾ ಒಂದೊಂದು ಬಿಡಿಸಿ ಹೇಳಿದೆ, ಅದಕ್ಕಾಗಿ ನಿಮ್ಮಿಂದ ಉತ್ತರವನ್ನು ಕೂಡ ಬಯಸಲಿಲ್ಲ.

ಶ್ರೀ ಕೆ. ಎನ್. ನಾಗೇಗೌಡ : ಒಂದು ನಿಮಿಷ ಖರ್ಗೆಯವರೇ, ದಯವಿಟ್ಟು ಕೇಳಿ ಆಲಮಟ್ಟಿ ಲೆಫ್ಟ್ ಬ್ಯಾಂಕ್‌ನಲ್ಲಿ 20 ಕಿ.ಮೀ. ಆಗಿದೆ. 75 ಕಿ.ಮೀ. ಇದೆ head works ಆಗದೆ ಕೆನಲ್ ಮಾಡಿಕೊಂಡು ಏನು ಮಾಡುತ್ತೀರಿ. You complete the head works. ವಾಟರ್ ಫ್ಲೋಯಿಂಗ್‌ಗೆ ಕೆನಲ್ ಮಾಡಬೇಕು, ಒಟ್ಟಾರೆ ನಾವು ಯುಕೆಪಿಯಲ್ಲಿ ಅತ್ಯಂತ ಶರವೇಗದಲ್ಲಿ ಕೆಲಸ ಮಾಡುತ್ತಿದ್ದೇವೆ. ಎಲ್ಲಾ ಪ್ರೋಗ್ರಾಮನ್ನು ಷೆಡ್ಯೂಲ್ ಪ್ರಕಾರ ಮಾಡಿದ್ದೇವೆ. ಇನ್ನು ಮುಂದಿನ 2-3 ವರ್ಷಗಳಲ್ಲಿ 2,000 ವರ್ಷದೊಳಗೆ ಸಂಪೂರ್ಣವಾಗಿ ನಮ್ಮ ಭಾಗದ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಯಾವುದೇ ಕೆಲಸವಾಗಲೀ ಕುಂಠಿತವಾಗಿಲ್ಲ, ನಿಧಾನವೂ ಆಗಿಲ್ಲ. ನಿಧಾನ ಆಗಿದ್ದರೆ ಹಿಂದೆ ಆಗಿರಬೇಕೆ ವಿನಃ ಮುಂದೆ ಆಗುವುದಿಲ್ಲವೆಂಬ ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಅಧ್ಯಕ್ಷರು : ವೆರಿಗುಡ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ನಿಧಾನ ಹೇಗೆ ಆಗಿದೆ ಎಂದು ನಾನು ಸವಿಸ್ತಾರವಾಗಿ ಹೇಳಿದ್ದೇನೆ. ಪುನಃ ನಾನು ಪುನರುಚ್ಚಾರ ಮಾಡುವುದಿಲ್ಲ. ಆದರೆ ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ. Re-settlement & Rehabilitation Commissioner, S.M. Jamdar. ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಕೆಲವು ಇಲಾಖೆಗಳಲ್ಲಿ, ಕೆಇಬಿ ಇಲಾಖೆಯಲ್ಲಿ, ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ ಪಿಡಬ್ಲ್ಯೂಡಿಯಲ್ಲಿ ಮತ್ತು ಬೇರೆ ಇಲಾಖೆಯಲ್ಲಿ ಕೂಡ ಹಣವನ್ನು ದುರುಪಯೋಗ ಮಾಡಿದ್ದಾರೆ. ಬಾಗಲಕೋಟೆ ಡೆವಲಪ್‌ಮೆಂಟ್ ಅಥಾರಿಟಿ ಪುನರ್ ವಸತಿ ಯೋಜನೆಯಲ್ಲಿ, 65 ಲಕ್ಷ 1 ಕಿ.ಮೀ.ಗೆ ಎಸ್ಟಿಮೇಟ್ ಮಾಡಿದ್ದಾರೆ. ಅದನ್ನು ಕಂಡುಹಿಡಿದವರು ಇದನ್ನು ಹೇಗೆ 1 ಕಿ.ಮೀ. ಗೆ 65 ಲಕ್ಷ ಅಂದರೆ ಎಷ್ಟರಮಟ್ಟಿಗೆ ದುಡ್ಡು ಹೋಗುತ್ತಾ ಇರಬೇಕು ಎಂದು ಹೇಳಿ. ಎಲ್ಲಾ ಇಲಾಖೆಯಲ್ಲಿ ಅವರು ಸ್ವಲ್ಪ ಇದನ್ನು ರಿಎಕ್ಸಾಮಿನ್ ಮಾಡಿದ ಮೇಲೆ ಪ್ರತಿಯೊಂದು ಇಲಾಖೆಯಲ್ಲಿ ಲೋಪದೋಷಗಳು ಕಂಡುಬಂದ ಮೇಲೆ ಅವರು ಸರ್ಕಾರಕ್ಕೆ ಒಂದು ವರದಿಯನ್ನು ಸಲ್ಲಿಸಿದರು. ಅದನ್ನು ಸಲ್ಲಿಸಿ ಈ ಮಾತನ್ನು ಅವರು ಕೇಳಿದಾಗ ವರದಿ ಸಲ್ಲಿಸಿದ್ದೀರಿ. ಇದರಲ್ಲಿ ಏನಾಯಿತು ಎಂದು ಅವರು ಹೇಳಿದರು. ನಾವು ವರದಿ ಸಲ್ಲಿಸಿದ್ದೇವೆ. ಆದರೆ ಆ ಇಲಾಖೆಯಲ್ಲಿರತಕ್ಕಂಥ ಕೆಲವು ಅಧಿಕಾರಿಗಳನ್ನು ಇಲ್ಲಿಂದ ತೆಗೆದು ಅಲ್ಲಿಗೆ ಹಾಕಿದ್ದಾರೆ, ಅಲ್ಲಿಂದ ತೆಗೆದು ಇಲ್ಲಿಗೆ ಹಾಕಿದ್ದಾರೆ. ಆದರೆ ಎಲ್ಲಾ ಇಲಾಖೆಯ ಅಧಿಕಾರಿಗಳ ಮೇಲೆ ಯಾವ ಕ್ರಮವನ್ನು

ಕೂಡ ಜರುಗಿಸಿಲ್ಲ ಎನ್ನತಕ್ಕಂಥ ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಅವರು ಈ ಕಟಿಂಗ್ಸ್, ಟೈಮ್ಸ್ ಆಫ್ ಇಂಡಿಯಾದಲ್ಲಿ ಬಂದಂತಹ ರಿಪೋರ್ಟ್, ಡೆಕ್ಕನ್ ಹೆರಾಲ್ಡ್‌ನಲ್ಲಿ ಬಂದಂತಹ ರಿಪೋರ್ಟ್, ಹಿಂದೂವಿನಲ್ಲಿ ಬಂದಂತಹ ರಿಪೋರ್ಟ್ ನಾನು ಅವರಿಗೆ ಕೊಡ್ತೀನಿ. ದಿನಾಂಕವನ್ನು ಕೊಟ್ಟಿದ್ದೇನೆ. ಬಹುಶಃ ಅವರು ನೋಡಿ ಕೇಳಿರಬಹುದು. ಅದಕ್ಕೆ ಅವರು ಸಮಂಜಸವಾದ ಉತ್ತರವನ್ನು ತಿಳಿಸಿ ನಿಮಗೆ ಹೇಳಲಿ. ಎರಡನೆಯದಾಗಿ ಪೀಸ್ ಕಂಟ್ರಾಕ್ಟ್ ಸಾರ್. ನೀವು ಏಕೆ ಪೀಸ್‌ಪೀಸ್ ಅಂತಿದ್ದೀರಲ್ಲ. ಪೀಸ್ ಕಂಟ್ರಾಕ್ಟ್‌ನಲ್ಲಿ ಅಲ್ಲಿ ಮಾಡಿದ್ದಾರೆ. 200-300 ಕೋಟಿ ರೂಪಾಯಿಗಳ ಕೆಲಸ ಎರಡೇ ದಿವಸದಲ್ಲಿ ರಾತ್ರೋರಾತ್ರಿ ಹಂಚಿದ್ದಾರೆ. ಇದು ಅನ್ಯಾಯ. ಇದು ಕಾನೂನು ವಿರುದ್ಧ ಅದಕ್ಕೆ ದಯವಿಟ್ಟು ಇದರ ಬಗ್ಗೆ ತನಿಖೆ ಮಾಡಿಸಿ ಇದನ್ನು ಹಿಂದೆ ಮುಖ್ಯಮಂತ್ರಿಗಳಾಗಿದ್ದಾಗ ಅಂದರೆ ಪ್ರಧಾನಮಂತ್ರಿಗಳಾಗಿ ಹೋಗುವುದಕ್ಕೆ ಮುಂಚೆ, ಒಂದು ರಾತ್ರಿಯಲ್ಲಿ ಇದನ್ನು ಹಂಚಿದ್ದು, ಎಂದು ಹೇಳಿ ದಿನಾಂಕವನ್ನು ಎಲ್ಲ ಕೊಟ್ಟೆ. ಅದಕ್ಕೆ ನೀವು ಇದರಲ್ಲಿ ತನಿಖೆ ಮಾಡಿಸಿ ಸರಿಯೋ ಅಥವಾ ತಪ್ಪೋ ನೋಡಿಸಿ, ನಮ್ಮ ದೃಷ್ಟಿಯಲ್ಲಿ ತಪ್ಪು ಇದೆ. 200-300 ಕೋಟಿ ರೂಪಾಯಿಯನ್ನು ಸಾರಾಸಗಟು ಕೊಟ್ಟಿರುವುದು ಸರಿಯಲ್ಲ. ಅದಕ್ಕಾಗಿ ಇದನ್ನು ತನಿಖೆ ಮಾಡಿಸಿ, ಟೈಮ್ ಇಲ್ಲ ಅಂದರೆ ಲೋಕಾಯುಕ್ತಕ್ಕೆ ಹಾಕಿ, ಅದಕ್ಕೂ ಟೈಮ್ ಇಲ್ಲ ಅಂದರೆ ಎಸ್ಟಿಮೇಟ್ ಕಮಿಟಿಗೆ ಹಾಕಿ ಎಂದಿದ್ದಕ್ಕೆ ಅವರು ಏನೂ ಉತ್ತರ ಕೊಡಲಿಲ್ಲ. ಆಮೇಲೆ ಮೂರನೆಯದು ಎಮರ್‌ಜೆನ್ಸಿ ಸ್ಪೆಪ್ಸ್. ಏಕೆಂದರೆ ಎಮರ್‌ಜೆನ್ಸಿ ಸ್ಟೆಪ್‌ನಲ್ಲಿ ಜನರಿಗೆ ರಿಲೀಸ್ ಕೊಡುವುದಕ್ಕೆ, ನಿಮ್ಮ ಇಲಾಖಾ ವತಿಯಿಂದ ಏನೇನು ಪರ್ಮನೆಂಟ್ ಕೆಲಸ ಮಾಡುವುದು, ರೀ ಹೆಬಿಲಿಟೇಷನ್, ರೀಸೆಟಲ್‌ಮೆಂಟ್ ಒಂದು. ಆಮೇಲೆ ಟೆಂಪರ್‌ವರಿ ಕೊಡತಕ್ಕದ್ದು ನ್ಯಾಚುರಲ್ ಕೆಲಾಮಿಟೀಸ್ ಇನ್ನೊಂದು ಅದರಲ್ಲಿ ಏನು ಮಾಡಿದ್ದೀರಿ ಎನ್ನತಕ್ಕದ್ದು ಹೇಳಿಲ್ಲ. ಅವರು ಹೇಳಿದ್ದೇ ಓದಿದರು. ಅವರ ಬಳಿಯಲ್ಲಿರತಕ್ಕಂಥ ಕಾಗದ ಹೇಳಿಕೆಯನ್ನು ಅವರು ಸಮರ್ಥನೆ ಮಾಡಿಕೊಳ್ಳಲಿ. ಪವರ್ ಪ್ರಾಜೆಕ್ಟ್‌ದು ನಾನು ಹೇಳಿದೆ. ಕೇಂದ್ರ ಸರ್ಕಾರದಲ್ಲಿರತಕ್ಕಂತಹ ಆಂಧ್ರ ಪ್ರದೇಶದ ಮಂತ್ರಿಯವರಾದ ಶ್ರೀ ಸತ್ಯನಾರಾಯಣ್‌ರವರು ಈಗ ನಾವು ಆಲಮಟ್ಟಿಯಲ್ಲಿ ಚಾಮುಂಡೇಶ್ವರಿ ಪವರ್ ಪ್ರಾಜೆಕ್ಟ್ ತಡೆಹಿಡಿಯಬೇಕು ಎನ್ನತಕ್ಕಂತ ಪ್ರಯತ್ನ ಮಾಡಿ ತಡೆಹಿಡಿದಿದ್ದಾರೆ. ಅದಕ್ಕೆ ಆಂಧ್ರಪ್ರದೇಶದ ಮುಖ್ಯಮಂತ್ರಿಗಳ ಒತ್ತಡ ಕೂಡ ಇದೆ. ನೀವು ಯಾವ ರೀತಿಯಿಂದ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಆ ಪ್ರಾಜೆಕ್ಟ್‌ನ್ನು ಕ್ಲಿಯರ್ ಮಾಡಿಸಿಕೊಡಬೇಕು ಎಂದು ನಾನು ಕೇಳಿದೆ ಅದಕ್ಕೂ ಕೂಡ ಯಾವುದೇ ರೀತಿಯ ಸಮಂಜಸವಾದ ಉತ್ತರವನ್ನು ಹೇಳಲಿಲ್ಲ. ತದನಂತರ 1ನೇ ಜನವರಿ 1996ಕ್ಕೆ ಸೆಂಟ್ರಲ್ ಎಲೆಕ್ಟ್ರಿಸಿಟಿ ಬೋರ್ಡ್ ಅಥಾರಿಟಿ, ಗೌರ್ನಮೆಂಟ್ ಆಫ್ ಇಂಡಿಯಾ ಕ್ಲಿಯರ್ ಮಾಡಿದೆ. ಅದು ಕಾಗದ ಪತ್ರಗಳಲ್ಲಿ ಇದ್ದರೂ ಕೂಡ ಇವತ್ತು ಸತ್ಯನಾರಾಯಣ್‌ರವರು ಹಿಡಿದಿರತಕ್ಕ ಕಾರಣ ಏನು? ಪವರ್ ಮಿನಿಸ್ಟರ್, ಮತ್ತು ಸೆಂಟ್ರಲ್ ಪವರ್ ಮಿನಿಸ್ಟರ್, ಸೆಂಟ್ರಲ್ ಡಿಸೈನ್ ಅಂಡ್ ಗೇಜ್ ಇದರ ಬಗ್ಗೆಯೂ ಕೂಡ ಯಾವ ರೀತಿಯ ಫಿಕ್ಸ್ ಮಾಡಬೇಕು ಎಂದು ಹೇಳಿ. ಅವರು ಕ್ಲಿಯರೆನ್ಸ್ ಕೊಟ್ಟಿದ್ದಾರೆ. ಅದು ಎಲ್ಲವನ್ನು ಕೂಡ ಕೇಳಿದೆ. ಆದರೆ, ಸಮಂಜಸವಾದ ಉತ್ತರವನ್ನು ಕೊಟ್ಟಿಲ್ಲ. ತಾವು ಇದ್ದಾಗಲೂ ಕೂಡ ಕೇಳಿದೆ. ಇದರ ಬಗ್ಗೆ ಹೇಳಿಕೆ ಹೇಳಲಿಲ್ಲ. ನಾನು 100 ಕೋಟಿ ಮಾಡಿದೆ,

60 ಕೋಟಿ ಮಾಡಿದೆ ಓ ಅಂಡ್ ಡಿಗೆ 13 ಕೋಟಿ ಮಾಡಿದೆ, ಇನ್ನು ಮುಂದೆ ಇಷ್ಟು ಮಾಡುತ್ತೇವೆಂದು ಹೇಳಿ ಅಪ್ರಿಸಿಯೇಷನ್ ನಿಮ್ಮನ್ನು ಕೇಳಿದರು. ಇಲ್ಲಿ ಕೇಳಿದ್ದಕ್ಕೆ ಒಂದಕ್ಕೂ ಉತ್ತರವನ್ನು ಕೊಡಲಿಲ್ಲ. ಅಂದರೆ ಅಧ್ಯಕ್ಷರೆ, ನಾವು ಏನು ಮಾಡಬೇಕು, ವಾಕ್‌ಔಟ್ ಮಾಡಬೇಕೇ? ಅಥವಾ ಧರಣಿ ಮಾಡಬೇಕಾ ಅಥವಾ ಬೇರೆ ಏನಾದರೂ ಮಾಡಬೇಕಾ? ಈ ಸರ್ಕಾರ, ನೀರಾವರಿ ಇಲಾಖೆ, ಕಂದಾಯ ಇಲಾಖೆ ರೈತರ ಪಾಲಿಗೆ ಸತ್ತಿದೆಯೆಂದು ಹೇಳಿ ಏನಾದರೂ ನಾವೂ 2 ನಿಮಿಷ ಮೌನ ಆಚರಿಸಬೇಕೇ? ಏನಾದರೊಂದು ಮಾಡಬೇಕಾಗಿತ್ತು. ಆದ್ದರಿಂದ, ದಯವಿಟ್ಟು ಇದನ್ನು ಪ್ರೊಟೆಸ್ಟ್ ಮಾಡಿ ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಸರ್ಕಾರದ ನಿಲುವನ್ನು ಪ್ರತಿಭಟಿಸಿ ವಿರೋಧ ಪಕ್ಷದ ನಾಯಕರಾದ ಶ್ರೀ ಎಂ. ಮಲ್ಲಿಕಾರ್ಜನ ಖರ್ಗೆಯವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಪವರ್ ಪ್ರಾಜೆಕ್ಟ್ ಬಗ್ಗೆ ಸಂಕ್ಷಿಪ್ತವಾಗಿ ಹೇಳುತ್ತೇನೆ. ಏಕೆಂದರೆ, ಅದು ರೆಕಾರ್ಡ್‌ಗೆ ಹೋಗಬೇಕು. ಪವರ್ ಪ್ರಾಜೆಕ್ಟ್ ಬಗ್ಗೆ ಹೇಳುವುದಾದರೆ, ಆಲಮಟ್ಟಿ ಮಲ್ಟಿಪರ್‌ಪಸ್ ಪ್ರಾಜೆಕ್ಟ್‌ಗೆ ನಮ್ಮ ಆಲಮಟ್ಟಿಯಲ್ಲಿ ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿಯವರು ಪ್ರಿನ್ಸಿಪಾಲ್ ಕ್ಲಿಯರೆನ್ಸ್ ಕೊಟ್ಟಿದ್ದಾರೆ. ಈ ಪ್ರಿನ್ಸಿಪಲ್ ಕ್ಲಿಯರೆನ್ಸ್‌ನ್ನು ಚಾಮುಂಡೇಶ್ವರಿ ಸಂಸ್ಥೆಗೆ ಕೊಟ್ಟಿರುವುದರಿಂದ ಈಗ ಪವರ್ ಪರ್‌ಚೇಸ್ ಅಗ್ರಿಮೆಂಟ್ ಮಾತ್ರ ಆಗಬೇಕು. ಇದು ಆದ ಕೂಡಲೇ ಪವರ್ ಪರ್‌ಚೇಸ್ ಬಿಟವೀನ್ ಚಾಮುಂಡೇಶ್ವರಿ ಮತ್ತು ಕೆ.ಇ.ಬಿ. ಇದು ತಕ್ಷಣ ಆಗುತ್ತದೆ. ಇದರಲ್ಲಿ ಕಳೆದ ಹತ್ತು ವರ್ಷಗಳಲ್ಲಿ ರೇಟ್ ಕಂಟ್ರಾಕ್ಟ್‌ನಲ್ಲಿ ಬಂದಿರತಕ್ಕ 27 ಬ್ಯಾಡ್ ವರ್ಕ್ಸ್‌ನಲ್ಲಿ 50 ಎ.ಇ.ಇ.ಗಳು ಮತ್ತು ಜೆ.ಇ.ಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಇನಿಶಿಯೇಟ್ ಮಾಡಿದ್ದೇವೆ. ಕೆ.ಇ.ಬಿ.ಯಲ್ಲಿ ಆಗಿರುವ ಇರೆಗ್ಯೂಲಾರಿಟೀಸ್ ಬಗ್ಗೆ 1.5 ಕೋಟಿ ರೂಪಾಯಿಗಳ ಸಂಬಂಧದಲ್ಲಿ ಲೋಕಾಯುಕ್ತದಿಂದ ಎನ್‌ಕ್ವೈರಿ ಮಾಡಿಸಿ 9 ಜನ ಇಂಜಿನಿಯರುಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ. Regarding BTDA over-estimated irregularities reports made to the government, COD enquiry is initiated. 34 persons are involved including 33 engineers. out of them, 4 ಚೀಫ್ ಇಂಜಿನಿಯರುಗಳು ಆಂಟಿಸಿಪೇಟರಿ ಬೇಲ್ ತೆಗೆದುಕೊಂಡು ಅವರು ಅಕ್ಯೂಸ್ಡ್ ಆಗಿದ್ದಾರೆ. ಆರ್ ಅಂಡ್ ಆರ್ ಇರ್ - ರೆಗ್ಯೂಲರಿಟೀಸ್ ವಿಚಾರದಲ್ಲಿ ಪುನರ್ ವಸತಿ ನಿರ್ಮಾಣ ಮಾಡದಿದ್ದರೂ ಹಣವನ್ನು ರಿಲೀಸ್ ಮಾಡಿದ್ದಾರೆ. ಅಂಥ 9 ಜನರ ಮೇಲೆ ಕ್ರಿಮಿನಲ್ ಕೇಸುಗಳನ್ನು ಹಾಕಲಾಗಿದೆ. ಅವರೆಲ್ಲ ಸಸ್ಪೆನ್ಸ್‌ನಲ್ಲಿದ್ದಾರೆ. ಒಬ್ಬ ಎಕ್ಸಿಕ್ಯುಟೀವ್ ಇಂಜಿನಿಯರನ್ನು ನಾವು ಸಸ್ಪೆಂಡ್ ಮಾಡಿದ್ದೇವೆ. ತಪ್ಪಿತಸ್ಥರ ಮೇಲೆ ಏನೂ ಸಹ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದ್ದಾರೆ. ಇಲ್ಲಿ ಕೆಲವರ ಮೇಲೆ ಲೋಕಾಯುಕ್ತದಿಂದ ಎನ್‌ಕ್ವೆಯರಿ ನಡೆಯುತ್ತಿದೆ. ಕೆಲವರು ಅಂಟಿಸಿಪೇಟೇರಿ ಬೇಲ್ ತೆಗೆದುಕೊಂಡಿದ್ದಾರೆ, ಕೆಲವರನ್ನು ಸಸ್ಪೆನ್ಸ್‌ನಲ್ಲಿ ಇಟ್ಟಿದ್ದೇವೆ. ಹೀಗೆ ಬೇರೆ ಬೇರೆ ಹಂತದಲ್ಲಿ ನಾವು ಆಕ್ಷನ್ ತೆಗೆದು ಕೊಂಡಿದ್ದೇವೆ. ಇನ್ನು ಬಾಗಲಕೋಟೆಯಲ್ಲಿನ ರಿಹ್ಯಾಬಿಲಿಟೇಷನ್‌ಗೆ ನಮ್ಮದು 427 ಕೋಟಿ ರೂಪಾಯಿ ಕಾಸ್ಟ್ ಇರತಕ್ಕಂಥದ್ದು. ಕೊನೆಯದಾಗಿ, ಜುರಾಲದ ಬಗ್ಗೆ ಹೇಳುವುದಾದರೆ ರಿಹ್ಯಾಬಿಲಿಟೇಷನ್‌ಗೊಸ್ಕರ

4.7ಕೋಟಿ ರೂಪಾಯಿ ಹಣವನ್ನು ಆಂಧ್ರದವರು ಕೊಟ್ಟಿದ್ದಾರೆ. 1 ಕೋಟಿ 76ಲಕ್ಷ ರೂಪಾಯಿಯಲ್ಲಿ 1 ಕೋಟಿ 47 ಲಕ್ಷ ರೂಪಾಯಿಗಳನ್ನು ಜುರಾಲಾ ಬಗ್ಗೆ ನಮಗೆ ಆಂಧ್ರದವರು ಕಾಂಪನ್ಸೇಷನ್ ಆಗಿ ಕೊಟ್ಟಿದ್ದಾರೆ. ವಂದನೆಗಳು.

ಅಧ್ಯಕ್ಷರು : ಈಗ ಸಭೆಯನ್ನು ಮುಂದೂಡಿ ಪುನಃ ಮಧ್ಯಾಹ್ನ 3-00 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು ಮಧ್ಯಾಹ್ನ 2 ಗಂಟೆ 3 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3 ಗಂಟೆಗೆ ಸೇರಲು ನಿಶ್ಚಯಿಸಿತು)

ಸದನವು ಪುನಃ 3 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು.

(ಸಭಾಧ್ಯಕ್ಷರಾದ ಶ್ರೀ ರಮೇಶ್‌ಕುಮಾರ್‌ರವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

Regarding mismanagement of PHC.,Gudur, Guledagudda

333 - Sri. Rajashekaran Sheelavantha (Guledha gudda) : will The Minister for Health and Family welfare be pleased to state.

a) Whether the Government is aware of the mismanagement in the PHC of Gudur Village in Guledagudda constitutency.

b) What action the Government has taken on the staff responsible for the mismanagement.

Dr. H.C. Mahadevappa (Minister for Health & Family Welfare) :

a) Yes.

b) 1) The Medical Officer has been transferred and another has been posted.

2. The pharmacist has been transferred.

3. Memo had been issued to Junior Health Assistant (F), Junior Health Assistand (M) and 'D' Group official. They have informed in writing that they would work satisfactorily.